# ಪೀಠಿಕೆ

ಕೊಲೊಸ್ಸೆಯವರಿಗೆ ಪುಸ್ತಕವು ಕ್ರೈಸ್ತ ಸಾಹಿತ್ಯದಲ್ಲಿ ಶ್ರೇಷ್ಠ ಕೃತಿಗಳಲ್ಲೊಂದಾಗಿದೆ. ಇದು ಎಲ್ಲಾ ಕಾಲದ ಕ್ರೈಸ್ತರಿಗೆ ಪ್ರಾಮುಖ್ಯವಾಗಿರುವ ಮತ್ತು ಬೈಬಲಿನ ಪ್ರಮುಖ ಚರ್ಚೆಯಾಂಶಗಳನ್ನು ಸಂಕ್ಷೇಪವಾಗಿ ಪ್ರಸ್ತಾಪಿಸುವಂಥ ಬೋಧನೆಗಳನ್ನು ಒಳಗೊಂಡಿರುತ್ತದೆ. ಬಹುಶಃ ಈ ಚರ್ಚೆಯಾಂಶಗಳಲ್ಲಿ ಅತ್ಯಂಥ ಮಹತ್ವಪೂರ್ಣವಾದದ್ದೆಂದರೆ ದೇವರ ಪ್ರತಿರೂಪವಾಗಿರುವ ಯೇಸುವಿನ ಘನತೆಗೇರಿಸಲ್ಪಟ್ಟ ಸ್ವಭಾವ. ಆತನು ಸ್ವಭಾವತಃ ದೇವರು, ದೇವತ್ವದ ಸರ್ವಪರಿಪೂರ್ಣತೆಯನ್ನು ಹೊಂದಿರುವವನು, ಆತನು ಸಭೆಯ ಶಿರಸ್ಸಾಗಿದ್ದಾನೆ, ಮತ್ತು ಸಮಸ್ತವನ್ನು ಸೃಷ್ಟಿಸಿದವನಾಗಿದ್ದಾನೆ. ಯೇಸು ಪರಲೋಕದ ಕುರಿತ ನಮ್ಮ ನಿರೀಕ್ಷೆಯ ಮೂಲಧಾರ ಮತ್ತು ಪ್ರಾರ್ಥನೆಗೆ ಉತ್ತರ ಸಿಕ್ಕುವದಕ್ಕೆ ನಮ್ಮ ಭರವಸೆಯು ಆಗಿದ್ದಾನೆ. ಆತನು ಪಾಪಗಳಿಗೆ ಕ್ಷಮಾಪಣೆಯನ್ನು, ಹೊಸ ಜೀವನವನ್ನು, ಮತ್ತು ಜೀವನಕ್ಕೆ, ನೈತಿಕತೆಗೆ, ಹಾಗೂ ಆತ್ಮೀಕತೆಗೆ ದಿಶೆಯನ್ನು ಒದಗಿಸುತ್ತಾನೆ.

ಆರೋಗ್ಯಕರ ಕುಟುಂಬ ಸಂಬಂಧಗಳಿಗಾಗಿರುವ ದೇವರ ರೂಪರೇಖೆಯನ್ನು ಪೌಲನು ಮುಂದಿಡುತ್ತಾನೆ. ಅಲ್ಲದೆ ಆತನು ಕ್ರಿಸ್ತನ ಬದಲಾಗಿ ಮಾನವ ತತ್ವಜ್ಞಾನ ಹಾಗೂ ಸಂಪ್ರದಾಯಗಳನ್ನು ಹಿಂಬಾಲಿಸುವ ವಿರುದ್ಧವಾಗಿ ಎಚ್ಚರಿಕೆಯನ್ನು ಸಹ ಕೊಡುತ್ತಾನೆ. ಆತನು ಕ್ರೈಸ್ತರು ಅನುಸರಿಸಿ ಜೀವಿಸುವದಕ್ಕಾಗಿ ಕೊಲೊಸ್ಸೆ 3:23, 24ರಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾನೆ: "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ; ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ. ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ."

ಈ ಪತ್ರಿಕೆಯ ರಚನೆಯ ಹಿಂದೆ ಅನೇಕ ವ್ಯಕ್ತಿಗಳು ಇದ್ದರೆಂಬ ಅರ್ಥದಲ್ಲಿ ಇದು ವೈಯಕ್ತಿವಾದ ಪತ್ರಿಕೆಯಾಗಿದೆ. ತಿಮೊಥೆಯನು ಲೇಖಕನಾಗಿದ್ದನು (1:1), ಅವನ ಜೊತೆಗೆ ಇನ್ನು ಆರು ಜನರಿದ್ದರು — ಅರಿಸ್ತಾರ್ಕನು, ಮಾರ್ಕ, ಯುಸ್ತನು, ಎಪಫ್ರನು, ಲೂಕ, ಮತ್ತು ದೇಮನು (4:10-14) — ಅವರೆಲ್ಲರೂ ಕೊಲೊಸ್ಸೆಯ ಸಹೋದರರಿಗೆ ವಂದನೆಗಳನ್ನು ಹೇಳುತ್ತಾರೆ. ಅಲ್ಲದೆ ಇನ್ನು ಉಲ್ಲೇಖಿಸಲ್ಪಟ್ಟಿರುವವರೆಂದರೆ ಪತ್ರಿಕೆಯನ್ನು ಕೊಂಡೊಯ್ದು ತಲುಪಿಸಿದವನಾದ ತುಖಿಕನು, ಮತ್ತು ಆತನೊಂದಿಗೆ ಜೊತೆಯಾಗಿ ಪ್ರಯಾಣಿಸಲಿದ್ದ ಕೊಲೊಸ್ಸೆಗೆ ಸೇರಿದ ಒಬ್ಬ ಗುಲಾಮನಾಗಿದ್ದ ಒನೇಸಿಮನು (4:7-9). ಅದರಲ್ಲಿ ಅರ್ಖಿಪ್ಪನಿಗೆ ವಂದನೆ ಸಹ ಸೇರ್ಪಡೆಯಾಗಿತ್ತು (4:17), ಆತನು ಕೊಲೊಸ್ಸೆಯಲ್ಲಿ ವಾಸಿಸುತ್ತಿದ್ದನೆಂದು ಭಾವಿಸಲಾಗಿರುತ್ತದೆ. ಅಲ್ಲದೆ ಒನೇಸಿಮನ ಯಜಮಾನನಾದ ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ ಸಹ ಆತನು ಪ್ರಸ್ತಾಪಿಸಲ್ಪಟ್ಟಿದ್ದಾನೆ (ಫಿಲೆಮೋನ 1, 2).

## ಲೇಖಕ

ಆಂತರಿಕ ಮತ್ತು ಬಾಹ್ಯ ಪುರಾವೆಯು ಕೊಲೊಸ್ಸೆಯವರಿಗೆ ಪತ್ರಿಕೆಯ ಲೇಖಕನು ಪೌಲನೇ ಎಂದು ಸೂಚಿಸುತ್ತದೆ. 1800ರ ತನಕ, ಆತನ ಕರ್ತೃತ್ವವನ್ನು ಯಾರೊಬ್ಬರೂ ಪ್ರಶ್ನಿಸಲಿಲ್ಲ. ಪೌಲನ ಕರ್ತೃತ್ವವನ್ನು ತಿರಸ್ಕರಿಸಿ ಬರೆದ ಮೊದಲ ದಾಖಲೆಯು 1838ರಲ್ಲಿ Ernst Theodor Mayerhoff, *Der Brief an die Kolosser* ಎಂಬ ಪ್ರಕಾಶನದಲ್ಲಿ ಕಾಣಿಸಿಕೊಂಡಿತ್ತು.[1] ಅದಾದ ಮೇಲಿನಿಂದ ಇನ್ನು ಕೆಲವು ಲೇಖಕರು ಆತನ ಅಭಿಪ್ರಾಯಗಳನ್ನು ಅಂಗೀಕರಿಸಿಕೊಂಡಿರುತ್ತಾರೆ. ಪೌಲನ ಕರ್ತೃತ್ವದ ಕುರಿತ ಆಕ್ಷೇಪಣೆಗಳು ಶೈಲಿ, ಪದಗಳ ಬಳಕೆ, ಮತ್ತು ಕೆಲವು ಸಿದ್ಧಾಂತಿಕ ಹೇಳಿಕೆಗಳ ಮೇಲೆ ಆಧಾರವಾಗಿರುತ್ತವೆ. ಆ ಪ್ರಮುಖ ವಾದಗಳಲ್ಲೊಂದೆಂದರೆ ಆ ಪತ್ರಿಕೆಯು ಎರಡನೆಯ ಶತಮಾನದಲ್ಲಿದ್ದ ಒಂದು ಪಾಷಂಡಮತವಾದ ಗ್ನಾಸ್ಟಿಕ್ ಉಪದೇಶವನ್ನು ಖಂಡಿಸುವದಕ್ಕೆ ಬರೆಯಲ್ಪಟ್ಟಿತು, ಮತ್ತು ಪೌಲನು ಅದನ್ನು ಬರೆದಿರುವದಕ್ಕೆ ಬಹು ತಡವಾದ ಕಾಲವಾಗಿತ್ತು ಎಂಬದೆ. (6 ಮತ್ತು 8 ಪುಟಗಳಲ್ಲಿರುವ "ಮೂಲದ ಸ್ಥಳ ಮತ್ತು ದಿನಾಂಕ" ಕುರಿತ ಚರ್ಚೆಯನ್ನು ನೋಡಿರಿ.) ಈ ರೀತಿಯ ಯಾವದೇ ಆಕ್ಷೇಪಣೆಗಳು ಪೌಲನ ಕರ್ತೃತ್ವದೆಡೆಗೆ ಬೆರಳು ಮಾಡುವ ಪುರಾವೆಯ ಅಧಿಕತೆಯಿಂದ ಸೋಲಿಸಲ್ಪಡಬಹುದಾಗಿದೆ.

### ಬಾಹ್ಯ ಪುರಾವೆ

ಬಾಹ್ಯ ಪುರಾವೆಯು ಪೌಲನೇ ಲೇಖಕನು ಎಂಬುದರ ಕಡೆಗೆ ಒಲವು ತೋರಿಸುತ್ತದೆ ಮತ್ತು ಈ ಪತ್ರಿಕೆಯು ಆದಿಯಲ್ಲಿ ಪ್ರೇರಿತ ವಾಕ್ಯವೆಂಬದಾಗಿ ಅಂಗೀಕರಿಸಲ್ಪಟ್ಟಿತ್ತೆಂಬುದನ್ನು ಪ್ರಕಟಗೊಳಿಸುತ್ತದೆ. Henry Clarence Thiessen[2] ಈ ಪುರಾವೆಯನ್ನು ಹೀಗೆ ಸಾರಾಂಶಗೊಳಿಸುತ್ತಾನೆ:

Ignatiusನು (ಕ್ರಿ.ಶ 110) ತನ್ನ *Epistle to the Ephesians* (ಅಧ್ಯಾಯ 10) ಯಲ್ಲಿ ಕೊಲೊಸ್ಸೆ 1:23ರನ್ನು ಉಲ್ಲೇಖನ ಮಾಡಿರಬಹುದಾಗಿದೆ.

ಸುಮಾರು ಕ್ರಿ.ಶ 130ರಲ್ಲಿ ಬರೆಯಲ್ಪಟ್ಟ *Epistle of Barnabas* (ಅಧ್ಯಾಯ 12). ಕೊಲೊಸ್ಸೆ 1:16ರನ್ನು ಉಲ್ಲೇಖನ ಮಾಡುವಂತೆ ತೋರುತ್ತದೆ.

Justin Martyrನು (ಕ್ರಿ.ಶ 150) ತನ್ನ *Dialogue with Trypho* (ಅಧ್ಯಾಯಗಳು 84; 85; 138) ದಲ್ಲಿ, ಕೊಲೊಸ್ಸೆ 1:15ರಲ್ಲಿ ಸಿಕ್ಕುವ "ಸೃಷ್ಟಿಗೆಲ್ಲಾ ಜೇಷ್ಠಪುತ್ರ" ಎಂಬ ಪದವನ್ನು ಹಲವರು ಸಾರಿ ಬಳಸಿರುತ್ತಾನೆ.

ಅಂತಿಯೋಕ್ಯದ Theophilusನು (ಕ್ರಿ.ಶ 180) ತನ್ನ *To Autolycus* (2.22) ದಲ್ಲಿ ಅದೇ "ಸೃಷ್ಟಿಗೆಲ್ಲಾ ಜೇಷ್ಠಪುತ್ರನು" ಎಂಬ ಮಾತನ್ನು ಒಂದು ಸಾರಿ ಬಳಸಿರುತ್ತಾನೆ.

Irenaeusನು (ಕ್ರಿ.ಶ 180) ತನ್ನ *Against Heresies* (3.14.1)ರಲ್ಲಿ ಪೌಲನು, ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ "ಪ್ರಿಯ ವೈದ್ಯನಾಗಿರುವ ಲೂಕನು . . . ನಿಮಗೆ ವಂದನೆಗಳನ್ನು ಹೇಳುತ್ತಾನೆ" ಎಂದು ಬರೆದನು ಎಂಬದಾಗಿ ಹೇಳುತ್ತಾನೆ. ಈ ಹೇಳಿಕೆಯು ಕೊಲೊಸ್ಸೆ 4:14ರಲ್ಲಿ ಸಿಕ್ಕುತ್ತದೆ.

ಸುಮಾರು ಕ್ರಿ.ಶ. 150-215ರ ಹೊತ್ತಿನಲ್ಲಿ ಜೀವಿಸಿದ್ದ ಅಲೆಕ್ಸಾಂಡ್ರಿಯದ Clementನು, ತನ್ನ *Stromata* 1.1ರಲ್ಲಿ ಕೊಲೊಸ್ಸೆ 1:28ನ್ನು ಪೌಲನು ಹೇಳಿದ್ದು ಎಂಬದಾಗಿ ಉಲ್ಲೇಖಿಸುತ್ತಾನೆ. ಅಲ್ಲದೆ ಆತನು *Stromata* 4.7ರಲ್ಲಿ ಕೊಲೊಸ್ಸೆ 3:12, 14, 15 ಮತ್ತು *Stromata* 5.10ರಲ್ಲಿ ಕೊಲೊಸ್ಸೆ 4:2-4ನ್ನು ಸಹ ಉಲ್ಲೇಖಿಸುತ್ತಾನೆ.

Tertullianನು (ಕ್ರಿ.ಶ. 200) ತನ್ನ *Prescription Against Heretics* (ಅಧ್ಯಾಯ 7) ರಲ್ಲಿ ಕೊಲೊಸ್ಸೆ 2:8ನ್ನು ಮತ್ತು *Resurrection of the Flesh* (ಅಧ್ಯಾಯ 23) ರಲ್ಲಿ ಕೊಲೊಸ್ಸೆ 2:12, 13ನ್ನು ಉಲ್ಲೇಖಿಸುತ್ತಾನೆ.

Origen (ಕ್ರಿ.ಶ. 225) ತನ್ನ *Against Celsus* (5.8)ರಲ್ಲಿ, ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಪ್ರಸ್ತಾಪಿಸಿ ಪೌಲನಿಗೆ ಶ್ರೇಯಸ್ಸನ್ನು ಕೊಡುತ್ತಾ ಕೊಲೊಸ್ಸೆ 2:18, 19ನ್ನು ಉಲ್ಲೇಖಿಸುತ್ತಾನೆ.

Marcionನ Canonನಲ್ಲಿ, ಹಳೇ ಲ್ಯಾಟಿನ್.ನಲ್ಲಿ, ಹಳೇ ಸಿರಿಯಾಕ್.ನಲ್ಲಿ ಕೊಲೊಸ್ಸೆಯವರಿಗೆ ಪತ್ರಿಕೆಯು ಸೇರ್ಪಡೆಗೊಳಿಸಲ್ಪಟ್ಟಿತ್ತು. ಅದು Muratorian Fragment (ಕ್ರಿ.ಶ 170) ರಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಈ ಪತ್ರಿಕೆಯು ಎರಡನೆಯ ಶತಮಾನದ ಹಳೇ ಲ್ಯಾಟಿನ್ ಆವೃತ್ತಿಗಳಲ್ಲಿ ಕಂಡು ಬರುತ್ತದೆ, ಜೊತೆಗೆ ಎರಡನೆಯ ಶತಮಾನದ ಅಂತ್ಯದ ವೇಳೆ ಐಗುಪ್ತ್ಯದಲ್ಲಿ ಮೂಲ ಹೊಂದಿದ್ದ Chester Beatty codexನಲ್ಲಿ (P46 ಎಂದು ಕರೆಯಲ್ಪಡುವ) ಸಹ ಕಂಡು ಬರುತ್ತದೆ.

## ಆಂತರಿಕ ಪುರಾವೆ

ಅದೇ ರೀತಿಯಲ್ಲಿಯೇ ಆಂತರಿಕ ಪುರಾವೆ ಸಹ ಪೌಲನೇ ಲೇಖಕನೆಂಬದನ್ನು ಸೂಚಿಸುತ್ತದೆ.

ಮೊದಲನೆಯದಾಗಿ, ಲೇಖಕನು ತನ್ನನ್ನು 1:1ರಲ್ಲಿ ಪೌಲನು ಎಂದು ಪರಿಚಯಿಸಿಕೊಳ್ಳುತ್ತಾನೆ. ಆತನು ನಂತರ ತನ್ನನ್ನು ಪೌಲನು ಎಂದು ಹೆಸರಿಸಿಕೊಳ್ಳುತ್ತಾನೆ (1:23) ಮತ್ತು ಪತ್ರಿಕೆಯನ್ನು "ಇದು ಪೌಲನೆಂಬ ನಾನು ಸ್ವಂತ ಕೈಯಿಂದ ಬರೆದ ವಂದನೆ" ಎಂದು ಹೇಳುವ ಮೂಲಕ ಮುಕ್ತಾಯಗೊಳಿಸುತ್ತಾನೆ (4:18a).

ಎರಡನೆಯದಾಗಿ, ಕೊಲೊಸ್ಸೆಯವರಿಗೆ ಪತ್ರಿಕೆಯು ಪೌಲನ ಪತ್ರಿಕೆಯೆಂದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಫಿಲೆಮೋನನಿಗೆ ಬರೆದ ಪತ್ರಿಕೆಯೊಂದಿಗೆ ನಿಕಟವಾದ ಸಂಬಂಧ ಹೊಂದಿರುತ್ತದೆ. ಈ ಎರಡು ಪತ್ರಿಕೆಗಳು ಲೇಖಕನ ಸಂಗಡ ಇರುವವರೆಂಬದಾಗಿ ಒಂದೇ ರೀತಿಯ ಐದು ಜನರ ಹೆಸರುಗಳನ್ನು ಉಲ್ಲೇಖಿಸುತ್ತವೆ (ಕೊಲೊಸ್ಸೆ 4:10-14; ಫಿಲೆಮೋನ 23, 24). ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಅರ್ಖಿಪ್ಪನಿಗೆ "ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರಬೇಕೆಂದು" ಬುದ್ಧಿವಾದ ಹೇಳಲ್ಪಟ್ಟಿರುತ್ತದೆ (4:17). ಫಿಲೆಮೋನನಿಗೆ ಪತ್ರಿಕೆಯಲ್ಲಿ, ಪೌಲನು ಆತನನ್ನು "ನಮ್ಮ ಸಹಭಟನಾಗಿರುವ" ಎಂದು ಕರೆಯುತ್ತಾನೆ (ವ.2).

Donald Guthrieನು ಕೊಲೊಸ್ಸೆಯವರಿಗೆ ಮತ್ತು ಫಿಲೆಮೋನನಿಗೆ ಪತ್ರಿಕೆಗಳ

ನಡುವೆ ಮಾಡುವ ಹೋಲಿಕೆಯು ಅದು ಪೌಲನ ಪತ್ರಿಕೆಯೆಂದು ಗುರುತಿಸುವದಕ್ಕೆ ನಮಗೆ ಸಹಾಯ ಮಾಡುತ್ತದೆ. ಬಾಹ್ಯ ಮೂಲಾಧಾರಗಳು ಪೌಲನೇ ಅದರ ಲೇಖಕನು ಎಂಬುದನ್ನು ಸೂಚಿಸುತ್ತವೆಂದು ಹೇಳಿದ ಬಳಿಕ, ಆತನು ಹೀಗೆ ಬರೆಯುತ್ತಾನೆ:

> ಈ ಬಲವಾದ ಬಾಹ್ಯ ದೃಢೀಕರಣವು ಈ ಪತ್ರಿಕೆ ಮತ್ತು ಫಿಲೆಮೋನನಿಗೆ ಬರೆದ ಪತ್ರಿಕೆ ನಡುವಿನ ನಿಕಟ ಸಂಬಂಧದ ಮೂಲಕ ಮತ್ತಷ್ಟು ಪುಷ್ಟಿಗೊಳಿಸಲ್ಪಡುತ್ತದೆ, ಅವುಗಳ ವಿಶ್ವಾಸರ್ಹತೆಯನ್ನು ಕೇವಲ ಅತ್ಯಂಥ ಅತಿರೇಕವಾದ ನಕಾರಾತ್ಮಕ ಸಂದೇಹವಾದಿಗಳು ಮಾತ್ರವೇ ಆಕ್ಷೇಪಿಸುತ್ತಾರೆ. ಈ ಸಂಬಂಧವನ್ನು ಸಮರ್ಥಿಸುವದಕ್ಕೆ ಕಾರಣಗಳು ಈ ಕೆಳಗಿನಂತೆ ಹೇಳಲ್ಪಡಬಹುದಾಗಿದೆ.
>
> 1. ಆರಂಭಿಕ ವಂದನೆಗಳಲ್ಲಿ ಎರಡೂ ಪತ್ರಿಕೆಗಳು ಪೌಲನ ಜೊತೆಯಲ್ಲಿ ತಿಮೊಥೆಯನ ಹೆಸರನ್ನು ಸಹ ಒಳಗೊಂಡಿರುತ್ತವೆ (ಕೊಲೊಸ್ಸೆ 1:1; ಫಿಲೆಮೋನ 1).
> 2. ಎರಡು ಪತ್ರಿಕೆಗಳಲ್ಲಿ ಅರಿಸ್ತಾರ್ಕ, ಮಾರ್ಕ, ಎಪಫ್ರನು, ಲೂಕ ಮತ್ತು ದೇಮನು ವಂದನೆಗಳನ್ನು ತಿಳಿಸುತ್ತಾರೆ, ಅವರೆಲ್ಲರೂ ಆ ಸಂದರ್ಭದಲ್ಲಿ ಪೌಲನ ಸಂಗಡ ಇದ್ದರೆಂಬುದು ಸ್ಪಷ್ಟವಾಗಿರುತ್ತದೆ (ಕೊಲೊಸ್ಸೆ 4:10-14; ಫಿಲೆಮೋನ 23, 24).
> 3. ಫಿಲೆಮೋನನಿಗೆ 2ನೇ ವಚನದಲ್ಲಿ ಅರ್ಖಿಪ್ಪನು "ಸಹಭಟನು" ಎಂದು ಕರೆಯಲ್ಪಟ್ಟಿದ್ದಾನೆ, ಮತ್ತು ಕೊಲೊಸ್ಸೆ 4:17ರಲ್ಲಿ ಆತನಿಗೆ ತನ್ನ ಸೇವೆಯನ್ನು ನೆರವೇರಿಸಬೇಕೆಂದು ನಿರ್ದೇಶಿಸಲಾಗುತ್ತದೆ.
> 4. ಕೊಲೊಸ್ಸೆ 4:9ರಲ್ಲಿ ಒನೇಸಿಮನು . . . ತುಖಿಕನ ಸಂಗಡ ಕಳುಹಿಸಲ್ಪಡುತ್ತಿದ್ದಾನೆಂದು ಉಲ್ಲೇಖಿಸಲ್ಪಟ್ಟಿದ್ದಾನೆ ಮತ್ತು ಆತನು "ನಿಮ್ಮ ಊರಿನ"ವನು ಎಂದು ಬಣ್ಣಿಸಲ್ಪಟ್ಟಿದ್ದಾನೆ.
>
> ಈ ಎಲ್ಲಾ ಆಧಾರಾಂಶಗಳ ಬೆಳಕಿನಲ್ಲಿ ಎರಡು ಪತ್ರಿಕೆಗಳು ಬೇರೆ ಸಂದರ್ಭಗಳಲ್ಲಿ ಕಳುಹಿಸಲ್ಪಟ್ಟವೆಂದು ಊಹಿಸಿಕೊಳ್ಳುವದು ಅಸಾಧ್ಯವಾಗಿರುತ್ತದೆ, ಮತ್ತು ಫಿಲೆಮೋನನಿಗೆ ಬರೆದ ಪತ್ರಿಕೆಯ ವಿಶ್ವಾಸರ್ಹತೆಯು ಸಾಮಾನ್ಯವಾಗಿ ಪ್ರಶ್ನಾತೀತವಾಗಿರುವದರಿಂದ ಅದು ತನ್ನೊಂದಿಗೆ ಕೊಲೊಸ್ಸೆಯವರಿಗೆ ಪತ್ರಿಕೆಯು ಪೌಲನ ಒಂದು ನಿಜವಾದ ಕೃತಿ ಎಂಬ ಖಚಿತತೆಯನ್ನು ವ್ಯಕ್ತಪಡಿಸುತ್ತದೆ.[3]

ಮೂರನೆಯದಾಗಿ, ಕೆಲವರು ಗಲಾತ್ಯದವರಿಗೆ ಮತ್ತು ಎಫೆಸದವರಿಗೆ ಪತ್ರಿಕೆಗಳಲ್ಲಿನ ಪೌಲನ ಬರಹಗಳಿಗಿಂತ ಕೊಲೊಸ್ಸೆಯವರಿಗೆ ವ್ಯತ್ಯಾಸವಾಗಿರುತ್ತದೆಂದು ತರ್ಕವನ್ನು ಮಾಡುತ್ತಾರಾದರೂ, ಹೋಲಿಕೆಗಳು ಅಂತಹ ಆಕ್ಷೇಪಣೆಗಳನ್ನು ಮೀರಿಸುವಷ್ಟರ ಮಟ್ಟಿಗೆ ಅತ್ಯಂಥ ಅಧಿಕವಾಗಿರುತ್ತವೆ.[4] ಮುಂದಿನ ಪುಟದಲ್ಲಿರುವ ನಕ್ಷೆಯು ಆ ಮೂರು ಪುಸ್ತಕಗಳಲ್ಲಿರುವ ಅನೇಕ ಹೋಲಿಕೆಗಳ ಒಂದು ನಮೂನೆಯು ಇರುತ್ತದೆ.[5]

## ಕೊಲೊಸ್ಸೆಯವರಿಗೆ, ಎಫೆಸದವರಿಗೆ, ಮತ್ತು ಗಲಾತ್ಯದವರಿಗೆ ಬರೆದ ಪತ್ರಿಕೆಗಳಲ್ಲಿರುವ ಸಮಾನರೂಪದ ಉಪದೇಶಗಳು

| | | ಕೊಲೊಸ್ಸೆ | ಎಫೆಸ | ಗಲಾತ್ಯ |
|---|---|---|---|---|
| 1. | ಕ್ರೈಸ್ತರಿಗಾಗಿ ಆಂತರ್ಯದಲ್ಲಿ ಬಲ | 1:11 | 3:16 | |
| 2. | ಕ್ರಿಸ್ತನು, ಸಭೆಗೆ ಶಿರಸ್ಸು | 1:18; 2:19 | 1:22, 23<br>4:15; 5:23 | |
| 3. | ಕ್ರಿಸ್ತನ ಸರ್ವೋನ್ನತೆ | 1:18 | 1:20-22 | |
| 4. | ಕ್ರಿಸ್ತನ ಸರ್ವಪರಿಪೂರ್ಣತೆ | 1:19; 2:9 | 1:23; 3:19 | |
| 5. | ಕ್ರಿಸ್ತನ ಮೂಲಕ ಕ್ರೈಸ್ತರ ಪರಿಶುದ್ಧತೆ | 1:21, 22 | 5:25-27 | |
| 6. | ಹಿಂದಿನ ಯುಗದ ಮರ್ಮ: ಅನ್ಯಜನರ ಸೇರ್ಪಡೆ | 1:26, 27;<br>2:2; 4:3 | 1:9; 3:3-9;<br>6:19 | |
| 7. | ದೀಕ್ಷಾಸ್ನಾನ ಹೊಂದಿದವರಿಗೆ ನಂಬಿಕೆಯ ಮೂಲಕ, ಶುದ್ಧತೆ | 2:12, 13 | 5:26 | 3:26, 27 |
| 8. | ಕ್ರಿಸ್ತನೊಂದಿಗೆ ಒಂದು ಹೊಸ ಜೀವನ | 2:13; 3:1 | 2:5, 6 | |
| 9. | ವಿಧಿರೂಪವಾಗಿದ್ದ ಧರ್ಮಶಾಸ್ತ್ರ ವನ್ನು ತೆಗೆದುಹಾಕುವಿಕೆ | 2:14 | 2:14, 15 | 3:24, 25 |
| 10. | ವಿಶೇಷ ಧಾರ್ಮಿಕ ದಿನಗಳು ಇನ್ನು ಅಗತ್ಯವಿಲ್ಲ | 2:16 | | 4:10 |
| 11. | ಕ್ರೈಸ್ತರು ಕ್ರಿಸ್ತನನ್ನು ದೃಢವಾಗಿ ಹಿಡಿದುಕೊಂಡು ಸುಳ್ಳು ಬೋಧನೆಗಳಿಗೆ ಒಳಗಾಗ ಮಾಡಿಕೊಳ್ಳಕೂಡದು | 2:18-20 | 4:13-15 | |
| 12. | ಶಿರಸ್ಸಿನ ಸಹಾಯದಿಂದ ದೇಹದ ಭಕ್ತಿವೃದ್ಧಿ | 2:19 | 4:16 | |
| 13. | ಪೂರ್ವದಲ್ಲಿದ್ದ ದುರ್ಭಾವ ವಿಸರ್ಜಿಸಿ ನೂತನಸ್ವಭಾವ ಧರಿಸಿಕೊಳ್ಳುವದು | 3:8-14 | 4:22-26 | |
| 14. | ಕ್ರೈಸ್ತರು ಒಂದೇ ದೇಹವಾಗಿ ಕಾರ್ಯನಿರ್ವಹಿಸತಕ್ಕದ್ದು | 3:15 | 2:16; 4:4 | |
| 15. | ಹಾಡುವಿಕೆಯ ಕುರಿತ ಬೋಧನೆ | 3:16 | 5:19 | |
| 16. | ಗಂಡಹೆಂಡತಿಯರಿಗೆ, ಮಕ್ಕಳಿಗೆ, ಯಜಮಾನರಿಗೆ ಮತ್ತು ಸೇವಕರಿಗೆ ಬೋಧನೆ | 3:18-4:1 | 5:23-6:9 | |

ಕೊಲೊಸ್ಸೆಯವರಿಗೆ ಪತ್ರಿಕೆಯ ಅನನ್ಯವಾದ ಪದಪಟ್ಟಿ ಮತ್ತು ಶೈಲಿಯಲ್ಲಿನ ಇತರ ವ್ಯತ್ಯಾಸಗಳ ವಿಷಯದಲ್ಲಿ, ಈ ಗುಣಸ್ವಭಾವಗಳು ಕೊಲೊಸ್ಸೆಗೆ ಮಾತ್ರವೇ ಸೇರಿದ ಸಮಸ್ಯೆಗಳ ಬಗ್ಗೆ ಪೌಲನು ಬಗೆಹರಿಸುವದರಲ್ಲಿ ಕಾಣಿಸಿಕೊಳ್ಳುತ್ತವೆಂಬದನ್ನು ಗಮನಿಸತಕ್ಕದ್ದು. ಉದಾಹರಣೆಗೆ, ಎಫೆಸದವರ ಅಗತ್ಯತೆಗಳು ಕೊಲೊಸ್ಸೆಯವರಿಗಿಂತ ವ್ಯತ್ಯಾಸವಾಗಿದ್ದವು. ಎಫೆಸದವರಿಗೆ ಮತ್ತು ಕೊಲೊಸ್ಸೆಯವರಿಗೆ ಪತ್ರಿಕೆಗಳಲ್ಲಿ ಬೇರೆ ಬೇರೆ ವಿಷಯಗಳಿಗೆ ಒತ್ತು ಕೊಡಲಾಗಿರುತ್ತದೆ ಎಂಬುದನ್ನು Curtis Vaughan ತೋರ್ಪಡಿಸುತ್ತಾನೆ:

> . . . ಎಫೆಸದವರಿಗೆ ಪತ್ರಿಕೆಯಲ್ಲಿ ಒತ್ತನ್ನು ಕ್ರಿಸ್ತನ ದೇಹವಾದ ಸಭೆಯ ಮೇಲೆ ಕೊಡಲಾಗಿರುತ್ತದೆ; ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಸಭೆಯ ಶಿರಸ್ಸಾದ ಕ್ರಿಸ್ತನ ಮೇಲೆ ಒತ್ತು ಕೊಡಲ್ಪಟ್ಟಿದೆ . . . ಕೊಲೊಸ್ಸೆಯವರಿಗೆ ಪತ್ರಿಕೆಯು ನಿರ್ದಿಷ್ಟ, ಸದೃಢ, ಮತ್ತು ಸಂದಿಗ್ಧವಾದದ್ದು; ಎಫೆಸದವರಿಗೆ ಪತ್ರಿಕೆಯು ಅಮೂರ್ತ, ಉಪದೇಶಾತ್ಮಕ, ಮತ್ತು ಸಾಮಾನ್ಯ ಆಗಿರುತ್ತದೆ . . . ಕೊಲೊಸ್ಸೆಯವರಿಗೆ ಪತ್ರಿಕೆಯು . . . ಒಂದು "ಚರ್ಚೆಯ ಪತ್ರಿಕೆ"; ಎಫೆಸದವರಿಗೆ . . . ಒಂದು "ಅವಲೋಕನದ ಪತ್ರಿಕೆ."[6]

ಕೆಲವು ವ್ಯತ್ಯಾಸಗಳಿರುತ್ತಾದರೂ, ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿರುವ ಬಹುತೇಕ ವ್ಯಕ್ತಪಡಿಸುವ ವೈಖರಿಗಳು ಪೌಲನ ಪತ್ರಿಕೆಗಳಂತೆಯೇ ಇರುತ್ತವೆ. ಬಾಹ್ಯ ಪುರಾವೆಯ ಅಧಿಕತೆಯು ಗಲಾತ್ಯದವರಿಗೆ, ಎಫೆಸದವರಿಗೆ, ಮತ್ತು ಫಿಲೆಮೋನನಿಗೆ ಪತ್ರಿಕೆಗಳ ಲೇಖಕನು ಒಬ್ಬನೇ ಎಂಬದರೆಡೆಗೆ ಬೆರಳು ತೋರಿಸುತ್ತದೆ.

## ಮೂಲದ ಸ್ಥಳ ಮತ್ತು ದಿನಾಂಕ

ಪೌಲನು ಸೆರೆಮನೆಯಲ್ಲಿರುವ ವೇಳೆ ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಬರೆದನು (4:3, 10, 18; ನೋಡಿರಿ 3:1; 4:1; 6:20; ಫಿಲಿಪ್ಪಿ 1:7, 13, 14, 16; ಫಿಲೆಮೋನ 1, 9, 10, 13). ಆತನು ಸೆರೆಮನೆಯಲ್ಲಿ ಅತ್ಯಂಥ ದೀರ್ಘಕಾಲ ಇದ್ದದ್ದು ಕೈಸರೈಯ (ಅಪೊಸ್ತಲರ ಕೃತ್ಯಗಳು 24:27) ಮತ್ತು ರೋಮಾಪುರದಲ್ಲಿ (ಅಪೊಸ್ತಲರ ಕೃತ್ಯಗಳು 28:30). ಒಬ್ಬ ಸುವಾರ್ತಾ ಪ್ರಚಾರಕನಾಗಿ, ಆತನು ಒಂದೇ ಸ್ಥಳದಲ್ಲಿ ಅತಿ ದೀರ್ಘಕಾಲವನ್ನು ಎಫೆಸದಲ್ಲಿ ಕಳೆದನು (ಅಪೊಸ್ತಲರ ಕೃತ್ಯಗಳು 20:17, 31). ಆದುದರಿಂದ, ಕೊಲೊಸ್ಸೆಯನ್ನು ಬರೆದಿರಬಹುದಾದ ಸಂಭಾವ್ಯ ಸ್ಥಳವೆಂಬದಾಗಿ ಈ ಪಟ್ಟಣಗಳ ಹೆಸರುಗಳನ್ನು ಅತಿ ಹೆಚ್ಚು ಸಾರಿ ಉಲ್ಲೇಖಿಸಲಾಗಿರುತ್ತದೆ.

ಎಫೆಸ ಪಟ್ಟಣದ ಪರವಾಗಿ ಒಲವು ತೋರುವವರು ಹೇಳುವದೇನೆಂದರೆ ಅದು ಕೊಲೊಸ್ಸೆಗೆ ಸಮೀಪದಲ್ಲಿತ್ತಾದ್ದರಿಂದ, ಪೌಲನು ಸುಲಭವಾಗಿ ಅಲ್ಲಿನ ಸಭೆಯ ಕುರಿತು ಮತ್ತು ಅವರು ಎದುರಿಸಿರಬಹುದಾದ ಯಾವದೇ ಸಮಸ್ಯೆಯ ಬಗ್ಗೆ ಸುದ್ದಿಯನ್ನು ಕೇಳಿರುವದಕ್ಕೆ ಸಾಧ್ಯವಿರುತ್ತಿತ್ತು ಎಂಬದೆ. ಪೌಲನು ಕೈಸರೈಯ ಅಥವಾ ರೋಮಾಪುರದ ಬದಲಾಗಿ ಎಪೆಸದಲ್ಲಿ ಇದ್ದಿದ್ದರೆ ಪೌಲನಿಗೆ ಸುದ್ದಿಯನ್ನು ಮುಟ್ಟಿಸುವದಕ್ಕೆ ಎಪಫ್ರನು ಕಡಿಮೆ ದೂರವನ್ನು ಪ್ರಯಾಣವನ್ನು ಮಾಡಬೇಕಾದ್ದಿರಬಹುದು (ಕೊಲೊಸ್ಸೆ 1:7). ಪೌಲನು ಫಿಲೆಮೋನ 22ರಲ್ಲಿ ಆತನಿಗೋಸಕ್ಕರ ತಂಗುವದಕ್ಕಾಗಿ ಒಂದು ಸ್ಥಳವನ್ನು ಏರ್ಪಡಿಸುವಂತೆ ವಿನಂತಿಸಿಕೊಳ್ಳುತ್ತಾನೆ, ಅದು ಪೌಲನಿಗೆ ಸಮೀಪದ ಸ್ಥಳವಾಗಿತ್ತೆಂಬ

ಅರ್ಥವನ್ನು ಸೂಚಿಸುತ್ತದೆ.

ಹೇಗೂ, ಎಫೆಸವನ್ನು ತಳ್ಳಿಹಾಕಬಹುದು ಯಾಕೆಂದರೆ ಆತನು ಎಫೆಸದಲ್ಲಿ ಸೇವೆಯನ್ನು ಮಾಡುವ ವೇಳೆ ಸೆರೆಮನೆಯಲ್ಲಿದ್ದನೆಂಬುದಕ್ಕೆ ನಮಗೆ ಯಾವದೇ ನಿಖರವಾದ ಪುರಾವೆ ಇರುವದಿಲ್ಲ (ಅಪೊಸ್ತಲರ ಕೃತ್ಯಗಳು 20:31). ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧಮಾಡಿದ್ದರ ಕುರಿತು ಆತನು ಉಲ್ಲೇಖಿಸುವದು (1 ಕೊರಿಂಥ 15:32) ಆತನು ಸೆರೆಮನೆಗೆ ಹಾಕಲ್ಪಟ್ಟಿದ್ದನೆಂಬುದನ್ನು ಸಾಭಿತುಪಡಿಸುವದಿಲ್ಲ. ಮಾರ್ಕ ಮತ್ತು ಲೂಕನು ಎಫೆಸದಲ್ಲಿದ್ದುಕೊಂಡು ವಂದನೆಗಳನ್ನು ಹೇಳಿದ್ದಾಗಿದ್ದರೆ (ಕೊಲೊಸ್ಸೆ 4:10, 14), ಅದು ಅಪೊಸ್ತಲರ ಕೃತ್ಯಗಳು ಪುಸ್ತಕದೊಂದಿಗೆ ಸಾಮರಸ್ಯಗೊಳಿಸಲ್ಪಡುವದಿಲ್ಲ, ಅದು ಎಫೆಸದಲ್ಲಿ ಅವರು ಪೌಲನ ಸಂಗಡ ಇದ್ದರೆಂಬ ಬಗ್ಗೆ ಏನನ್ನೂ ಹೇಳುವದಿಲ್ಲ (ಅಪೊಸ್ತಲರ ಕೃತ್ಯಗಳು 19). ಪೌಲನು ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಬರೆಯುವ ವೇಳೆ ಲೂಕನು ಅವನೊಂದಿಗೆ ಇದ್ದನು (ಕೊಲೊಸ್ಸೆ 4:14); ಆದರೆ ಅಪೊಸ್ತಲರ ಕೃತ್ಯಗಳು 19ರಲ್ಲಿ "ನಾವು" ಎಂಬ ವಾಕ್ಯಭಾಗಗಳಿಲ್ಲದಿರುವಿಕೆಯು ತೋರ್ಪಡಿಸುವದೇನೆಂದರೆ, ಎಫೆಸದಲ್ಲಿ ಪೌಲನು ಇದ್ದ ವೇಳೆಯಲ್ಲಿ, ಅಪೊಸ್ತಲರ ಕೃತ್ಯಗಳ ಪುಸ್ತಕದ ಲೇಖಕನಾದ ಲೂಕನು ಆತನ ಸಂಗಡ ಇರಲಿಲ್ಲ ಎಂಬದೆ. ಆತನು ಪೌಲನ ಸಂಗಡ ರೋಮಾಪುರಕ್ಕೆ ಪ್ರಯಾಣಿಸಿದ್ದಂತೂ ನಿಜವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 27:1; 28:16).

ಪೌಲನು ಕೈಸರೈಯದ ಸೆರೆಮನೆಯಲ್ಲಿರುವ ವೇಳೆ ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಬರೆದನೆಂದು ನಂಬುವವರು ಆ ಸಮಯದಲ್ಲಿ ಬಹು ಸಂಭಾವ್ಯವಾಗಿ ಅರಿಸ್ತಾರ್ಕ ಮತ್ತು ತುಖಿಕರು ಪೌಲನ ಸಂಗಡ ಇದ್ದರೆಂದು ನಂಬುತ್ತಾರೆ. ಪೌಲನು ಯೆರೂಸಲೇಮಿಗೆ ಪ್ರಯಾಣಿಸಿದಾಗ ಅವರು ಆತನ ಜೊತೆಯಲ್ಲಿದ್ದರು (ಅಪೊಸ್ತಲರ ಕೃತ್ಯಗಳು 20:4) ಮತ್ತು ಆತನು ಕೈಸರೈಯದಲ್ಲಿರುವ ವೇಳೆ ಆತನ ಸೇವೆಯನ್ನು ಮಾಡುವದಕ್ಕಾಗಿ ಅವರು ಆ ಸ್ಥಳಕ್ಕೂ ಆತನನ್ನು ಹಿಂಬಾಲಿಸಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 24:23).

ಪೌಲನು ಕೊಲೊಸ್ಸೆಯವರಿಗೆ ಬರೆದ ಸ್ಥಳವಾಗಿ ಕೈಸರೈಯವನ್ನು ಸಹ ಅಲ್ಲವೆಂದು ತಳ್ಳಿಹಾಕಬಹುದಾಗಿದೆ. ಆತನು 1:28, 29ರಲ್ಲಿ ಸುಳಿವು ಕೊಡುವ ಉಪದೇಶದ ಸೇವೆಯು ಆತನು ಕೈಸರೈಯದಲ್ಲಿರುವ ವೇಳೆ ನಡೆಯುತ್ತಲಿತ್ತೆಂಬ ಬಗ್ಗೆ ಅಪೊಸ್ತಲರ ಕೃತ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ. ಆತನು ಗೃಹ ಬಂಧನದಲ್ಲಿದ್ದುಕೊಂಡವನಾಗಿ ರೋಮಾಪುರದಲ್ಲಿ ಕನಿಷ್ಠ ಎರಡು ವರ್ಷಗಳ ಕಾಲ ಸುವಾರ್ತೆಯನ್ನು ಸಾರಿದನು (ಅಪೊಸ್ತಲರ ಕೃತ್ಯಗಳು 28:16, 30, 31). ಪತ್ರಿಕೆಯು ಕೈಸರೈಯದಲ್ಲಿ ಬರೆಯಲ್ಪಟ್ಟಿದ್ದಾಗಿದ್ದರೆ ಮಾರ್ಕನು ಜೊತೆಯಲ್ಲಿರುವದನ್ನು ವಿವರಿಸುವದು ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕದೊಂದಿಗೆ ಸಾಮರಸ್ಯಗೊಳಿಸುವದು ಕಷ್ಟಕರವಾಗಿರುತ್ತದೆ. ಮಾರ್ಕನು ಪೌಲನನ್ನ ತೊರೆದು ಬಾರ್ನಬನೊಂದಿಗೆ ಕುಪ್ರದ್ವೀಪಕ್ಕೆ ಹೋಗಿದ್ದನು (ಅಪೊಸ್ತಲರ ಕೃತ್ಯಗಳು 15:39).

ಬಹು ಸಂಭಾವ್ಯವಾಗಿ, ಕೊಲೊಸ್ಸೆಯವರಿಗೆ ಬರೆಯುವ ವೇಳೆ ಪೌಲನು ರೋಮಾಪುರದಲ್ಲಿದ್ದನು. ಈ ಅಭಿಪ್ರಾಯವು ಕ್ರಿ.ಶ 375ರಷ್ಟು ಆರಂಭದಲ್ಲಿಯೇ Chrysostom ನಿಂದ ವ್ಯಕ್ತಪಡಿಸಲ್ಪಟ್ಟಿದೆ.[7] ಇದು ಪೌಲನ ಮತ್ತು ಮಾರ್ಕನ ನಡುವೆ ಸಮಾಧಾನವನ್ನು ಏರ್ಪಡಿಸಿಕೊಳ್ಳಲು ಸಮಯವನ್ನು ಒದಗಿಸುವದಾಗಿತ್ತು.

ಫಿಲಿಪ್ಪಿಯವರಿಗೆ ಪತ್ರಿಕೆಯಲ್ಲಿ, ಅದು ಸಹ ಸೆರೆಮನೆಯಲ್ಲಿರುವ ವೇಳೆ ಬರೆಯಲ್ಪಟ್ಟಿದ್ದು, ಅದರಲ್ಲಿ ಪೌಲನು "ಅರಮನೆಯ ಪಹರೆಯವರು" ಮತ್ತು "ಚಕ್ರವರ್ತಿಯ ಮನೆಯವರು" ಎಂದು ಉಲ್ಲೇಖಿಸುತ್ತಾನೆ (ಫಿಲಿಪ್ಪಿ 1:13; 4:22). ಈ ಪದಪ್ರಯೋಗವು ಫಿಲಿಪ್ಪಿಯವರಿಗೆ ಪತ್ರಿಕೆಯನ್ನು ಬರೆಯುವ ವೇಳೆ ಪೌಲನು ರೋಮಾಪುರದಲ್ಲಿದ್ದನೆಂಬುದನ್ನು ತೋರ್ಪಡಿಸುತ್ತದೆ.

ಪತ್ರಿಕೆಯನ್ನು ಬರೆಯುವ ವೇಳೆ ಪೌಲನು ಎಫೆಸದಲ್ಲಿ ಇದ್ದಿರುವದಾದರೆ, ಬರೆಯಲ್ಪಟ್ಟ ದಿನಾಂಕವು ಅಂದಾಜಿನಲ್ಲಿ ಕ್ರಿ.ಶ. 52ರಿಂದ 54ರ ನಡುವೆ ಆಗಿರುತ್ತದೆ. ಒಂದು ವೇಳೆ ಆತನು ಕೈಸರೈಯದಲ್ಲಿ ಸೆರೆಯಾಳಾಗಿರುವ ವೇಳೆಯಲ್ಲಿ ಬರೆದಿದ್ದರೆ, ದಿನಾಂಕವು ಸುಮಾರು ಕ್ರಿ.ಶ. 57ರಿಂದ 59 ನಡುವೆ ಇರಬಹುದಾಗಿದೆ.[8] ಒಂದು ವೇಳೆ, ತೀರ್ಮಾನಿಸಲ್ಪಟ್ಟಿರುವ ಪ್ರಕಾರ, ಆತನು ರೋಮಾಪುರದಲ್ಲಿ ಸೆರೆಮನೆಗೆ ಹಾಕಲ್ಪಟ್ಟ ವೇಳೆಯಲ್ಲಿ ಬರೆದಿದ್ದರೆ, ದಿನಾಂಕವು ಸುಮಾರು ಕ್ರಿ.ಶ. 60ರಿಂದ 62ರ ನಡುವೆ ಆಗಿರುತ್ತದೆ.

## ತಲುಪಬೇಕಾದ ಸ್ಥಳ

ಈ ಪತ್ರಿಕೆಯು ಕೊಲೊಸ್ಸೆಯಲ್ಲಿರುವ ಕ್ರೈಸ್ತರಿಗೆ ಬರೆಯಲ್ಪಟ್ಟಿತ್ತು. "ಕೊಲೊಸ್ಸೆ" ಎಂಬುದಕ್ಕೆ ಗ್ರೀಕ್‌ನಲ್ಲಿ ಎರಡು ಬೇರೆ ಬೇರೆ ಉಚ್ಚಾರಣೆಗಳಿರುತ್ತವೆ, *Kolossai* ಮತ್ತು *Kolassai*. ಎರಡೂ ಸಹ ಪ್ರಾಚೀನ ಹಸ್ತಪ್ರತಿಗಳಲ್ಲಿಯೂ ಶಿಲಾಶಾಸನಗಳಲ್ಲಿಯೂ ಕಂಡು ಬರುತ್ತವೆ. ಬಹುಶಃ ಮೊದಲಿನ ಉಚ್ಚಾರಣೆಯು ಪ್ರಾಚೀನ ರೂಪವಾಗಿರುತ್ತದೆ, ಮತ್ತು ನಂತರದ ಉಚ್ಚಾರಣೆಯು ಈ ಪತ್ರಿಕೆಯನ್ನು ಬರೆಯುವ ಕಾಲದಲ್ಲಿ ಬಳಕೆಯಲ್ಲಿತ್ತು. ಅದರ ಹೆಸರನ್ನು ಆ ಪ್ರಾಂತ್ಯದಲ್ಲಿರುವ ಕಲ್ಲುಗಳ ನಿಕ್ಷೇಪದ ಆಕಾರಗಳ ಕಾರಣದಿಂದ, ಒಂದು ಬೃಹತ್ ಪ್ರತಿಮೆಯಾದ *colossus* ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದ್ದಾಗಿರಬಹುದು. ಇನ್ನೊಂದು ಸಂಭಾವ್ಯವಾದ ವಿವರಣೆಯೆಂದರೆ, ಸ್ಥಳಿಯ ಉಣ್ಣೆಯ ಉದ್ಯಮದ ಕಾರಣದಿಂದ ಆ ಹೆಸರು ಉಗಮವಾಯಿತು ಎಂಬದೆ: ಅಲ್ಲಿ ಉತ್ಪಾದಿಸಲಾಗುವ ಬಣ್ಣ ಹಾಕಲ್ಪಟ್ಟ ಬಟ್ಟೆಯನ್ನು ಸೂಚಿಸಲು ಬಳಸುವ ಗ್ರೀಕ್ ಪದವು *colossinus*, ಅದರರ್ಥವು "ನೇರಳೆ."[9]

ಕೊಲೊಸ್ಸೆಯು ಪೆರ್ಗಮ ರಾಜ್ಯದಲ್ಲಿದ್ದ ಒಂದು ಪ್ರಾಂತ್ಯವಾದ Phrygiaದಲ್ಲಿನ ಒಂದು ಪಟ್ಟಣವಾಗಿತ್ತು. ಅದರ ಸಮೀಪದಲ್ಲಿ ಎರಡು ಪ್ರಭಾವಶಾಲಿ ಪಟ್ಟಣಗಳು ಇದ್ದವು: ಪಶ್ಚಿಮಕ್ಕೆ ಹನ್ನೆರಡು ಮೈಲುಗಳಷ್ಟು ದೂರದಲ್ಲಿ ಲವೊದಿಕೀಯ, ಮತ್ತು ವಾಯುವ್ಯಕ್ಕೆ ಹದಿಮೂರು ಮೈಲುಗಳಷ್ಟು ದೂರದಲ್ಲಿ ಹಿರಿಯಾಪೊಲಿಯ. ಪೌಲನು ಕೊಲೊಸ್ಸೆಯವರಿಗೆ ಬರೆಯುವ ವೇಳೆ ಈ ಪಟ್ಟಣಗಳೆಲ್ಲೆಲ್ಲಾ ಒಂದು ಕ್ರೈಸ್ತ ಸಮುದಾಯವು ಇತ್ತು (ಕೊಲೊಸ್ಸೆ 2:1; 4:13-16). ಈ ಪಟ್ಟಣಗಳಿಗಿಂತಲೂ ಮುಂಚೆಯೇ ಸುವಾರ್ತಾ ಸಾರಲ್ಪಟ್ಟಿರಬಹುದಾದ ಎಫೆಸವು, ಪಶ್ಚಿಮ ಕಡೆಗೆ ಅಂದಾಜು 120 ಮೈಲುಗಳಷ್ಟು ದೂರದಲ್ಲಿತ್ತು. ರೋಮಾಪುರವು ಮೊದಲ ಶತಮಾನದ ಸಂಚಾರ ದಾರಿಯ ಪ್ರಕಾರವಾಗಿ ಸುಮಾರು ಒಂದು ಸಾವಿರ ಮೈಲುಗಳಷ್ಟು ದೂರವಿತ್ತು. (23ನೇ ಪುಟದಲ್ಲಿರುವ ನಕ್ಷೆಯನ್ನು ನೋಡಿರಿ.)

ಲೈಕಸ್ ಕಣಿವೆಯಲ್ಲಿರುವದಾಗಿದ್ದ ಕೊಲೊಸ್ಸೆಯು ಮಿಯಂಡರ್ ನದಿಯ ಉಪನದಿಯಾದ ಲೈಕಸ್ ನದಿಯ ದಕ್ಷಿಣ ದಿಕ್ಕಿನ ದಡದಲ್ಲಿ ಒಂದು ನಗರ ದುರ್ಗವನ್ನು

ಹೊಂದಿತ್ತು. ಕೊಲೊಸ್ಸೆಯು ಎರಡು ನದಿಗಳು ಸಂಗಮವಾಗುವ ಸ್ಥಳದಲ್ಲಿನ ಒಂದು ಕಮರಿಯಲ್ಲಿತ್ತು. ಆ ನೀರಿನಲ್ಲಿ ಅಸಹಜ ಮೊತ್ತದ ಸುಣ್ಣದ ಕಾರ್ಬನಿಕಾಮ್ಲವು ತುಂಬಿರುತ್ತಿದ್ದು ಅದು ಅದರ ದಡದುದ್ದಕ್ಕೂ ಗಮನಾರ್ಹ ರೀತಿಯಲ್ಲಿ ಹೊರಪೊರೆಯನ್ನು ಕಟ್ಟಿರುತ್ತಿತ್ತು ಮತ್ತು ಅದು ಬಟ್ಟೆಗೆ ಬಣ್ಣ ಹಾಕುವದಕ್ಕೆ ಅನುಕೂಲಕರವಾಗಿರುತ್ತಿತ್ತು. ದಕ್ಷಿಣಕ್ಕೆ ಮೂರು ಮೈಲು ದೂರದಲ್ಲಿ, ಪಟ್ಟಣಕ್ಕೆ 8,435 ಅಡಿಗಳಷ್ಟು ಎತ್ತರದಲ್ಲಿ Honaz Dag (ಕಾಡಮಸ್ ಪರ್ವತ) ಇತ್ತು; ಮತ್ತು ಉತ್ತರಕ್ಕೆ Mossyna ಶ್ರೇಣಿಯಿತ್ತು. ಕ್ರಿ.ಶ. 61[10]ರಲ್ಲಿ, ನಿರೋ ಚಕ್ರವರ್ತಿಯ ಆಳ್ವಿಕೆಯ ವೇಳೆಯಲ್ಲಿ, ಒಂದು ಭೂಕಂಪವು ಸಂಭವಿಸಿ ಲವೊದಿಕೀಯವನ್ನು ನಾಶಗೊಳಿಸಿತು ಅಥವಾ ಬಹಳ ಗಂಭೀರವಾಗಿ ದುರ್ಬಲಗೊಳಿಸಿತು ಮತ್ತು ಬಹುಶಃ ಕೊಲೊಸ್ಸೆ ಹಾಗೂ ಹಿರಿಯಾಪೊಲಿ ಪಟ್ಟಣಗಳ ಮೇಲೆ ಸಹ ಪರಿಣಾಮವನ್ನುಂಟು ಮಾಡಿತ್ತು. ಲೈಕಸ್ ಕಣಿವೆಯು ಭೂಕಂಪಗಳಿಂದ ಪೀಡಿಸಲ್ಪಡುವದಕ್ಕೆ ಮತ್ತು ಜ್ವಾಲಾಮುಖಿಯ ಚಟುವಟಿಕೆಗಳಿಗೆ ಪ್ರಸಿದ್ಧವಾಗಿತ್ತು.[11]

ಕ್ರಿಸ್ತನಿಗಿಂತ ಹಲವಾರು ಶತಮಾನಗಳ ಮುಂಚೆ, ಕೊಲೊಸ್ಸೆಯು Phrygia ಪ್ರಾಂತ್ಯದಲ್ಲಿನ ಅತ್ಯಂಥ ಶ್ರೀಮಂತ ಪಟ್ಟಣಗಳಲ್ಲೊಂದಾಗಿತ್ತು ಮತ್ತು ಎಫೆಸದಿಂದ ಯುಫ್ರೇಟಿಸ್ ನದಿಯ ಪ್ರಧಾನ ದಾರಿಯಲ್ಲಿದ್ದ ಒಂದು ಪ್ರಮುಖ ಪಟ್ಟಣವಾಗಿತ್ತು. ಇಬ್ಬರು ಸೈನ್ಯದ ನಾಯಕರು – ಅಹಷ್ವೇರೋಷ, ಕ್ರಿ.ಪೂ. 481ರಲ್ಲಿ, ಮತ್ತು ನಂತರ ಕ್ರಿ.ಪೂ 401ರಲ್ಲಿ, ಕಿರಿಯ ಕೋರೆಷ – ಇಲ್ಲಿ ಭೇಟಿ ಕೊಟ್ಟಿದ್ದರೆಂಬುದರಲ್ಲಿ ಅದಕ್ಕಿದ್ದ ಪ್ರಾಮುಖ್ಯತೆಯು ಕಂಡು ಬರುತ್ತದೆ.

Herodotus ನಿಂದ ವರದಿ ಮಾಡಲ್ಪಟ್ಟಿರುವ ಪ್ರಕಾರ, ಎಸ್ತೇರಳು ಪುಸ್ತಕದಲ್ಲಿ (1:1) ಅಹಷ್ವೇರೋಷ ಎಂದು ಕರೆಯಲ್ಪಟ್ಟಿರುವ ಪರ್ಸಿಯಾದ ಚಕ್ರವರ್ತಿಯಾದ Xerxesನು (ಕ್ರಿ.ಪೂ. 485-465), ಗ್ರೀಸ್‌ನ ಮೇಲೆ ದಾಳಿಮಾಡುವದಕ್ಕೆ ಪರ್ಸಿಯಾದಿಂದ ಪ್ರಯಾಣವನ್ನು ಆರಂಭಿಸಿದ ವೇಳೆ ಕೊಲೊಸ್ಸೆಯನ್ನು ದಾಟಿಕೊಂಡು ಹೋದನು. ನಂತರದಲ್ಲಿ ಕಿರಿಯ ಕೋರೆಷನ ಆಳ್ವಿಕೆಯಡಿಲ್ಲಿದ್ದ ಪ್ರತಿಭಾವಂತ ಯುವ ಗ್ರೀಕ್ ಸೇನಾನಾಯಕನಾಗಿದ್ದ ಝೆನೊಫೋನ್ (ಕ್ರಿ.ಪೂ. 401) ಒಂದು ದುರ್ವಿಧಿಯ ದಂಡಯಾತ್ರೆಯ ವೃತ್ತಾಂತಕ್ಕೆ ಕಾರಣನಾದನು, ಅ ವೇಳೆಯಲ್ಲಿ ತನ್ನ ಸೈನ್ಯವನ್ನು ಸಾರ್ದಿಸ್‌ನಿಂದ ಆಗ್ನೇಯಕ್ಕೆ ನಡಿಸುವವನಾಗಿ ಕೋರೆಷನು ಕೊಲೊಸ್ಸೆಯಲ್ಲಿ ಏಳು ದಿನಗಳ ಕಾಲ ತಂಗಿದ್ದನು. ಝೆನೊಫೋನನು ಕೊಲೊಸ್ಸೆಯನ್ನು "ನಿವಾಸಿಗಳಿಂದ ತುಂಬಿರುವ ಮತ್ತು ಸಮೃದ್ಧಿಯಿಂದ ಕೂಡಿರುವ ಮತ್ತು ಶ್ರೇಷ್ಠವಾಗಿರುವ ಒಂದು ಪಟ್ಟಣ" ಎಂದು ಕರೆದನು.[12] Herodotusನು ಕೊಲೊಸ್ಸೆಯನ್ನು "Phrygiaದ ಒಂದು ಶ್ರೇಷ್ಠ ನಗರ" ಎಂದು ಕರೆದನು.[13]

ಕೊಲೊಸ್ಸೆಯ ಆದಿ ನಿವಾಸಿಗಳು ದೇಶೀಯ Phrygiaಯರು ಮತ್ತು ಗ್ರೀಕ್ ವಸಾಹತುಗಾರರು ಆಗಿದ್ದರು. ಕ್ರಿ.ಪೂ. ಎರಡನೆಯ ಶತಮಾನದ ಆರಂಭದಲ್ಲಿ, Antiochus III (ಮಹಾ) ಮೆಸೊಪೊತಾಮ್ಯ ಮತ್ತು ಬಾಬಿಲೋನಿನಿಂದ ಎರಡು ಸಾವಿರ ಯೆಹೂದಿ ಕುಟುಂಬಗಳನ್ನು Lydia ಮತ್ತು Phrygia ಪಟ್ಟಣಗಳಿಗೆ ಆಮದು ಮಾಡಿದನು.[14] J. B. Lightfoot ನು ಯೆಹೂದ್ಯರಿಂದ ಕಟ್ಟಲ್ಪಟ್ಟ ದೇವಾಲಯದ ಕಂದಾಯದ ಆಧಾರದಲ್ಲಿ, ಲೈಕಸ್ ಕಣಿವೆಯಲ್ಲಿ ಬೃಹತ್ ಸಂಖ್ಯೆಯ ಯೆಹೂದ್ಯರು ನೆಲೆಸಿದ್ದರೆಂದು

ಇನ್ನೊಂದು ಸುಳಿವು ಕೊಡುತ್ತಾನೆ.[15]

ಕ್ರಿ.ಪೂ. 133ರಲ್ಲಿ, Attalid ರಾಜವಂಶದ ಕಡೇ ಅರಸನು ಪೆರ್ಗಮ ಸಾಮ್ರಾಜ್ಯವನ್ನು ರೋಮನ್ ರಾಷ್ಟ್ರೀಯ ಪರಿಷತ್ತಿಗೆ ಮತ್ತು ರೋಮನ್ ಜನರಿಗೆ ಉಯಿಲು ಬರೆದು ಕೊಟ್ಟನು. ಆ ಬಳಿಕ ಕೊಲೊಸ್ಸೆಯು ಒಂದು ರೋಮನ್ ಪ್ರಾಂತ್ಯವಾಗಿ ಮರುನಿರ್ಮಾಣಗೊಳಿಸಲ್ಪಟ್ಟಿತು. ಇದಾದ ಬಳಿಕ, ಅದು ಮತ್ತು Phrygian ಕ್ಷೇತ್ರದಲ್ಲಿದ್ದ ಇತರ ಪಟ್ಟಣಗಳು ಯಾವದೇ ಸ್ವತಂತ್ರ ರಾಜಕೀಯ ಮಹತ್ವವನ್ನು ಉಳಿಸಿಕೊಳ್ಳಲಿಲ್ಲ.

ಕ್ರೈಸ್ತ ಯುಗದ ಆರಂಭದ ಹೊತ್ತಿಗೆ, ಲವೊದಿಕೀಯ ಮತ್ತು ಹಿರಿಯಾಪೊಲಿಯ ಪಟ್ಟಣಗಳಿಂದ ಮೇಲುಗೈ ಸಾಧಿಸಲ್ಪಟ್ಟು ಕೊಲೊಸ್ಸೆಯು ಒಂದು ಮಹತ್ವವಿಲ್ಲದ ಪಟ್ಟಣವಾಗಿ ಹೋಗಿತ್ತು. ಕ್ರಿಸ್ತನ ಕಾಲದ ಹೊತ್ತಿನಲ್ಲಿ ಬರೆಯುವವನಾಗಿ, ಭೂಗೋಳಶಾಸ್ತ್ರಜ್ಞನಾದ Straboನು ಕೊಲೊಸ್ಸೆಯನ್ನು "ಒಂದು ಚಿಕ್ಕ ನಗರ" ಎಂದು ಕರೆದನು.[16]

ಕೊಲೊಸ್ಸೆಯು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಭಿನ್ನತೆಗಳಿಂದ ಕೂಡಿತ್ತು. ಅದು ಪಶ್ಚಿಮ ಮತ್ತು ಪೂರ್ವ ದಿಕ್ಕಿನ ನಡುವಿನ ಪ್ರಮುಖ ವ್ಯಾಪಾರ ಮಾರ್ಗದಲ್ಲಿತ್ತಾದ್ದರಿಂದ, ಅದು ಪಾಶ್ಚಾತ್ಯ ಮತ್ತು ಪೂರ್ವಾತ್ಯ ಸಂಸ್ಕೃತಿಗಳ ತತ್ವಜ್ಞಾನಗಳ ಪ್ರಭಾವಕ್ಕೊಳಪಟ್ಟಿತ್ತು. ಆಸ್ಯ ಮತ್ತು Phrygiaಕ್ಕೆ (ಅದು ಕೊಲೊಸ್ಸೆಯನ್ನು ಸಹ ಒಳಗೊಂಡಿರಬಹುದಿತ್ತು) ಸೇರಿದ ಯೆಹೂದ್ಯರು ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿದ್ದರು (ಅಪೊಸ್ತಲರ ಕೃತ್ಯಗಳು 2:9, 10). ಆದುದರಿಂದ, ಕೊಲೊಸ್ಸೆಯಲ್ಲಿನ ಸಭೆಯು ಯೆಹೂದಿ ಮತದಿಂದ ಪರಿವರ್ತನೆಗೊಂಡವರನ್ನು ಒಳಗೊಂಡಿತ್ತೆಂದು ಭಾವಿಸಿಕೊಳ್ಳುವದರಲ್ಲಿ ಅಪಾಯವೇನಿಲ್ಲ. ಪೌಲನು ಕೊಲೊಸ್ಸೆ 2:16 ರಲ್ಲಿ ಯೆಹೂದ್ಯರ ಆಚಾರಗಳ ಬಗ್ಗೆ ಮಾತಾಡುವದು ಇದನ್ನು ಇನ್ನಷ್ಟು ದೃಢೀಕರಿಸುತ್ತದೆ.

ಅನ್ಯದೇವತೆಯಾದ Cybeleಯ ಆರಾಧನೆಯು ಲೈಕಸ್ ಕಣಿವೆಯಲ್ಲಿ ಆಳವಾಗಿ ಬೇರೂರಿತ್ತು ಮತ್ತು ಬಹುಶಃ ಕೊಲೊಸ್ಸೆಯಲ್ಲಿ ಸಹ ಆಚರಿಸಲ್ಪಡುತ್ತಿತ್ತು. ಕೊಲೊಸ್ಸೆಯಲ್ಲಿ ದೊರಕಿರುವ ನಾಣ್ಯಗಳು ತೋರಿಸುವದೇನೆಂದರೆ ರೋಮನ್ ಸಾಮ್ರಾಜ್ಯದ ವೇಳೆಯಲ್ಲಿ (c. ಕ್ರಿ.ಪೂ. 27—ಕ್ರಿ.ಶ. 180)[17] ಜನರು ಐಶಿಸ್, ಸರಾಫಿಸ್, ಹೆಲಿಯೊಸ್, ದೆಮೆಟರ್, ಸಲೆನೆ, ಎಫೆಸದ ಅರ್ತೆಮಿಸ್, ಮತ್ತು ಬೇಟೆಗಾರಳಾದ ಅರ್ತೆಮಿಸ್ ದೇವತೆಗಳನ್ನು, ಜೊತೆಗೆ ಸ್ಥಳೀಯ Phrygian ದೇವರಾದ ಮೆನ್ ಮುಂತಾದವರ ಆರಾಧನೆಯನ್ನ ಮಾಡುತ್ತಿದ್ದರು. ತೋರುವ ಪ್ರಕಾಎ, ಕ್ರೈಸ್ತರಾಗಿ ಮಾರ್ಪಟ್ಟವರಲ್ಲಿ ಅನೇಕರು ಅನ್ಯದೇವರಾಧನೆಯ ಹಿನ್ನಲೆಯಿಂದ ಪರಿವರ್ತನೆಗೊಂಡವರಾಗಿದ್ದರು (ಕೊಲೊಸ್ಸೆ 1:21). ಅನ್ಯದೇವಾರಾಧನೆಯ ಹಿನ್ನಲೆಯ ಕೆಲವರು ಕ್ರೈಸ್ತರಾದರೆಂಬುದಕ್ಕೆ ಕೊಲೊಸ್ಸೆಯವರಲ್ಲಿ ಕೆಲವರ ಹೆಸರುಗಳು ಪುಷ್ಠಿ ಕೊಡುತ್ತವೆ.[18]

ಇಂದು, ಕೊಲೊಸ್ಸೆಯು ಟರ್ಕಿಯಲ್ಲಿ ಒಂದು ಪರಿತ್ಯಜಿಸಲ್ಪಟ್ಟಿರುವ ಮಣ್ಣಿನ ದಿಬ್ಬವಾಗಿ ಉಳಿದಿರುತ್ತದೆ. ಇಂದಿನ ತನಕ, ಅದನ್ನು ಎಂದಿಗೂ ಉತ್ಖನನ ಮಾಡಿರುವದಿಲ್ಲ. ಆ ದಿಬ್ಬದಿಂದ ವಾಯುವ್ಯ ದಿಕ್ಕಿಗೆ ಸುಮಾರು ಮೂರು ಮೈಲುಗಳಷ್ಟು ದೂರದಲ್ಲಿ Honaz ಎಂಬ ಗ್ರಾಮವಿರುತ್ತದೆ, ಅದು Eskisehr ದಿಂದ Denizli ನಡುವಿನ ರಸ್ತೆಯಿಂದ ಸ್ವಲ್ಪ ದೂರವಿರುವದು.

# ಪಾಷಂಡಮತದ ಸಮಸ್ಯೆ

ಕೊಲೊಸ್ಸೆಯವರಿಗೆ ಪತ್ರಿಕೆಯು ಒಂದು ಬಲವಾದ ಸಂದೇಶವನ್ನು ಒಳಗೊಂಡಿರುತ್ತದೆ ಆದರೆ ಕೊಲೊಸ್ಸೆಯಲ್ಲಿರುವ ಸಭೆಯೊಳಗೆ ಯಾವ ಸಮಸ್ಯೆಯು ಉದ್ಭವವಾಗಿತ್ತೆಂಬದರ ಕುರಿತು ಅನಿಶ್ಚಿತತೆಯನ್ನು ಹಾಗೆಯೇ ಉಳಿಸುತ್ತದೆ. ನಿರ್ದಿಷ್ಟವಾದ ದೋಷಪೂರಿತ ಉಪದೇಶವು ಸಭೆಯೊಳಗೆ ನುಸುಳಿತ್ತೋ, ಅಥವಾ ಒಟ್ಟಾರೆಯಾಗಿ ಸುಳ್ಳು ಬೋಧನೆಯ ಸಾಧ್ಯತೆಯ ಕುರಿತು ಪೌಲನು ಎಚ್ಚರಿಸುವವನಾಗಿದ್ದನೋ?

ಕೊಲೊಸ್ಸೆಯಲ್ಲಿ ಸಭೆಯು ಒಂದು ಸಮರ್ಪಣೆಯುಳ್ಳದ್ದು ಮತ್ತು ಬೆಳೆಯುತ್ತಿರುವಂಥದ್ದಾಗಿತ್ತೆಂಬದನ್ನು ಪೌಲನು ಪರೋಕ್ಷವಾಗಿ ಸೂಚಿಸುತ್ತಾನೆ. ಆತನು ಸದಸ್ಯರನ್ನು “ದೇವಜನರು” ಮತ್ತು “ನಂಬಿಗಸ್ತರು” ಎಂದು ಕರೆದನು (1:2). ಕ್ರಿಸ್ತನಲ್ಲಿ ಅವರು ಇಟ್ಟಿದ್ದ ನಂಬಿಕೆ ಮತ್ತು ಎಲ್ಲಾ ದೇವಜನರ ಕಡೆಗೆ ಅವರು ಹೊಂದಿದ್ದ ಪ್ರೀತಿಯು ವ್ಯಾಪಕವಾಗಿ ವರದಿ ಮಾಡಲ್ಪಟ್ಟಿತ್ತು (1:4). ಕೊಲೊಸ್ಸೆಯವರು ಫಲವನ್ನು ಕೊಡುತ್ತಿದ್ದರು (1:6). ಅವರು ರಾಜ್ಯದೊಳಗೆ ಇದ್ದರು (1:13), ದೇವರೊಂದಿಗೆ ಸಂಧಾನಪಡಿಸಿಕೊಂಡವರಾಗಿದ್ದರು (1:22). ಅವರು ದೀಕ್ಷಾಸ್ನಾನ ಹೊಂದಿದ್ದರು (2:12) ಮತ್ತು ಕ್ರಿಸ್ತನ ಸಂಗಡ ಬದುಕಿಸಲ್ಪಟ್ಟಿದ್ದರು (2:13). ಅವರು ಕ್ರಿಸ್ತನಲ್ಲೆ ಮರೆಯಾಗಿಡಲ್ಪಟ್ಟಿದ್ದರು (3:3), ಅವರು ದೇವರಿಂದ ಆರಿಸಿಕೊಳ್ಳಲ್ಪಟ್ಟವರೂ ಆತನಿಗೆ ಪ್ರಿಯರೂ ಆಗಿದ್ದರು (3:12), ಮತ್ತು ಒಂದೇ ದೇಹಕ್ಕೆ ಸೇರಿದವರಾಗಿದ್ದರು (3:15). ಅವರು ಯಾವದೇ ಅನೈತಿಕತೆಯಲ್ಲಾಗಲಿ ಅಥವಾ ಸಿದ್ಧಾಂತಿಕವಾಗಿ ವಿಷಯಾಂತರಲ್ಲಿ ಭಾಗಿಯಾಗಿದ್ದಾರೆಂಬದನ್ನು ಪೌಲನು ತಿಳಿಸಲಿಲ್ಲ.

ಎಪಫ್ರನು ಸಭೆಯಲ್ಲಿನ ಪರಿಸ್ಥಿತಿಯ ಕುರಿತ ಸುದ್ದಿಯನ್ನು ಪೌಲನಿಗೆ ತಲುಪಿಸಿದ್ದನು (1:7, 8). ಆತನು ಸದಸ್ಯರ ಬಗ್ಗೆ ಒಳ್ಳೇಯ ವರದಿಯನ್ನು ತಿಳಿಸಿದ್ದನಾದರೂ, ಬಹುಶಃ ಆತನು ಅವರ ಆಲೋಚನೆಯಲ್ಲಿದ್ದ ಸಮಸ್ಯೆಗಳನ್ನು ಸಹ ಆತನು ಗಮನಕ್ಕೆ ತಂದಿದ್ದನೆಂದು ತೋರುತ್ತದೆ. ಈ ಸಹೋದರರು ಇನ್ನೂ ಸತ್ಯವನ್ನು ಬಿಟ್ಟು ದೂರಕ್ಕೆ ಹೋಗದೆ ಇದ್ದಿರಬಹುದು, ಆದರೆ ಅವರನ್ನು ದಾರಿ ತಪ್ಪಿ ಹೋಗುವದರಿಂದ ತಡೆಯುವದಕ್ಕೆ ಪೌಲನು ಕನಿಷ್ಠ ಅವರಿಗೆ ಎಚ್ಚರಿಕೆಯನ್ನು ಕೊಡುವವನಾಗಿದ್ದನು.

ಪತ್ರಿಕೆಯ ಸ್ವಲ್ಪ ಭಾಗದಲ್ಲಿ, ಪೌಲನು ಅವರಿಗೆ ಸುವಾರ್ತೆಯನ್ನು ಬಿಟ್ಟು ಹೋಗದಂತೆ ಎಚ್ಚರಿಕೆಯನ್ನು ಕೊಡುತ್ತಾನೆ (2:4-23). ಈ ಎಚ್ಚರಿಕೆಗಳು ನಿರ್ದಿಷ್ಟವಾದ ಆಚಾರಗಳ ಕುರಿತಾಗಿದ್ದವಾದರೂ, ಅಂತಹ ಸಮಸ್ಯೆಗಳನ್ನು ಯಾರೋ ಪ್ರಚೋದಿಸಿದ್ದರೆಂಬ ಸೂಚ್ಯಾರ್ಥವನ್ನು ಪೌಲನು ನೀಡಲಿಲ್ಲ. ಅವರ ಸಂಸ್ಕೃತಿಯು ಅವರನ್ನು ಬಲವಾಗಿ ಸೆಳೆಯುವಂತದ್ದೆಂದು ಅರಿತುಕೊಂಡಿದ್ದ ಆತನು ಅವರನ್ನು ಕ್ರಿಸ್ತನಲ್ಲಿ ದೃಢವಾಗಿ ನಿಲ್ಲುವಂತೆ ಪ್ರೋತ್ಸಾಹಿಸಿದ್ದಿರಬಹುದಾಗಿದೆ.

1. *ಬಹುಶಃ ಪೌಲನು ಗ್ನಾಸ್ಟಿಕ್* (ಆದ್ಯಾತ್ಮ ರಹಷ್ಯಜ್ಞಾನವಾದ) *ಉಪದೇಶಗಳಿಗೆ ಉತ್ತರವನ್ನು ಕೊಡುವದಕ್ಕೆ ಪತ್ರಿಕೆಯನ್ನು ಬರೆದನು.* ಕೆಲ ಕಾಲದ ತನಕ, ಪೌಲನು ಮಾತಾಡುತ್ತಿದ್ದ ಪಾಷಂಡಮತವು Gnosticism ಆಗಿತ್ತೆಂದು ಭಾವಿಸಲಾಗಿತ್ತು, ಆದರೆ ಈ ವಿಚಾರವನ್ನು ಅನೇಕ ವ್ಯಾಖ್ಯಾನಕಾರರು ಪರಿತ್ಯಜಿಸಿರುತ್ತಾರೆ. Gnosticism ಎರಡನೆಯ

ಶತಮಾನದ ತನಕ ಪೂರ್ಣವಾಗಿ ವಿಕಾಸಗೊಂಡಿರಲಿಲ್ಲ. ಈ ಉಪದೇಶದ ಪ್ರಮುಖ ಅಂಶಗಳನ್ನು Peter Toon ಈ ಕೆಳಗಿನಂತೆ ಬಣ್ಣಿಸುತ್ತಾನೆ:

> ಸತ್ಯ ದೇವರು ನಿರ್ಮಲ ಆತ್ಮನಾಗಿದ್ದಾನೆ ಮತ್ತು ಕತ್ತಲೆಯ ಲೋಕದಿಂದ ಸಂಪೂರ್ಣ ಪ್ರತ್ಯೇಕವಾಗಿ ನಿರ್ಮಲ ಬೆಳಕಿನಲ್ಲಿ ನಿವಾಸಿಸುತ್ತಾನೆ. ಈ ಲೋಕವು ಕೆಟ್ಟದ್ದು, ಯಾಕೆಂದರೆ ಅದು ಭೌತವಸ್ತುವಿನಿಂದ ರಚಿತವಾಗಿದೆ, ಮತ್ತು ಭೌತವಸ್ತುವು ಕೆಟ್ಟದ್ದು. ಸತ್ಯ ದೇವರು ಅದರೊಂದಿಗೆ ಯಾವದೇ ಸಂಬಂಧ ಹೊಂದಿರುವದಿಲ್ಲ, ಯಾಕೆಂದರೆ ಅದು ಒಬ್ಬ ಸಣ್ಣ ದೇವರಿಂದ ಸೃಷ್ಟಿಸಲ್ಪಟ್ಟಿದ್ದು ಅದೊಂದು ತಪ್ಪು ಆಗಿತ್ತು. ಈ ಲೋಕದಲ್ಲಿನ ಜನರು ಸಾಮಾನ್ಯವಾಗಿ ದೇಹ ಮತ್ತು ಮನಸ್ಸುಗಳಿಂದ ರಚಿಸಲ್ಪಟ್ಟಿರುತ್ತಾರೆ, ಆದರೆ ಕೆಲವು ಜನರಲ್ಲಿ ನಿರ್ಮಲ ಆತ್ಮದ ಒಂದು ಹೊಳಪು ಇರುತ್ತದೆ. ಅಂಥ "ಆತ್ಮೀಕವಾದ" ಜನರನ್ನು ಈ ಕೆಟ್ಟ ಲೋಕದೊಳಗಿಂದ ಕಾಪಾಡುವ ಅಗತ್ಯವಿರುತ್ತದೆ; ಆದ್ದರಿಂದ ಒಬ್ಬ ರಕ್ಷಕನ ಅಗತ್ಯವಿದೆ. ಯೇಸು ದೇಹ ಮತ್ತು ಮನಸ್ಸುಗಳನ್ನೊಳಗೊಂಡು ಕಾಣಿಸಿಕೊಂಡನಾದರೂ, ಆತನು ನಿರ್ಮಲ ಆತ್ಮನಾಗಿದ್ದು ಬೆಳಕಿನಲ್ಲಿರುವ ಸತ್ಯ ದೇವರ ಕಡೆಯಿಂದ ಬೆಳಕಿನ ಆತ್ಮೀಕ ಮಂಡಲದ ಜ್ಞಾನವನ್ನುಂಟು (*gnosis*) ಮಾಡುವದಕ್ಕೆ ಬರುವ ರಕ್ಷಕನಾಗಿರುತ್ತಾನೆ. ಆದಕಾರಣ ಆತ್ಮದ ಹೊಳಪು ಹೊಂದಿರುವವರು ಆ ಜ್ಞಾನವನ್ನು ಸ್ವೀಕರಿಸಿಕೊಂಡು ಸತ್ಯ ದೇವರೊಂದಿಗೆ ಪುನಃ ಐಕ್ಯಗೊಳ್ಳಬಲ್ಲರು.[19]

ಗ್ನಾಸ್ಟಿಕ್‌ರು ಭೌತಿಕ ಲೋಕವು ಸಂಪೂರ್ಣ ಕೆಟ್ಟದ್ದು ಮತ್ತು ಆತ್ಮದ ಜಗತ್ತಿನಿಂದ ಪೂರ್ಣವಾಗಿ ಬೇರ್ಪಟ್ಟಿರುವದು ಆಗಿದೆಯೆಂದು ನಂಬಿದ್ದರು. ತತ್ಫಲಿತವಾದ ವಿಚಾರವು ದ್ವಿತ್ವವಾದ ಹುಟ್ಟಿಕೊಂಡಿತ್ತು, ಅದು ಭೌತವಸ್ತುವು ಒಳ್ಳೇದು ಮತ್ತು ಆತ್ಮೀಕತೆಗೆ ವಿರುದ್ಧವಾದ ಮೂಲತತ್ವವೆಂದು ಘೋಷಿಸುವ ಒಂದು ತತ್ವಶಾಸ್ತ್ರೀಕವಾದ ತತ್ವ ಸಿದ್ಧಾಂತವಾಗಿತ್ತು. ಈ ತತ್ವಜ್ಞಾನದ ಪ್ರಕಾರ, ದೇವರು (ಸಂಪೂರ್ಣ ಒಳ್ಳೇವನಾಗಿರುವವನು) ಭೌತವಸ್ತುವನ್ನು (ಕೆಟ್ಟದ್ದಾಗಿರುವಂಥದ್ದು) ಸೃಷ್ಟಿಸಿರಲಾರನು. ಗ್ನಾಸ್ಟಿಕ್‌ವಾದವು ಮಂಡಿಸುವ ವಿಚಾರವೇನೆಂದರೆ ಅತ್ಯುನ್ನತ ದೇವರೊಬ್ಬನ ಕೆಳಮುಖ ವರ್ತುಲದಿಂದ ಇತರ ಕೀಳುದರ್ಜೆಯ ದೇವರುಗಳು ಹೊರಹೊಮ್ಮಿದರು, ಮತ್ತು ಆ ಕೀಳುದರ್ಜೆಯ ದೇವರುಗಳಲ್ಲೊಬ್ಬನು ಲೋಕವನ್ನು ಸೃಷ್ಟಿ ಮಾಡಿದನು ಎಂಬದೆ. ಆ ದೇವರು ಇತರ ಆತ್ಮೀಕ ಜೀವಿಗಳ ಸಹಾಯದೊಂದಿಗೆ ಮಾನವರ ಪ್ರಾಣಗಳನ್ನು ಒಂದು ಭೌತಿಕ ಅಸ್ತಿತ್ವದಲ್ಲಿ ಬಂಧಿಯಾಗಿಸಿದ್ದು ಆ ಬಂಧನದೊಳಗಿಂದ ತಪ್ಪಿಸಿಕೊಂಡು ಆತ್ಮೀಕ ಅಸ್ತಿತ್ವದೊಳಗೆ ಸೇರುವದಕ್ಕೆ ವ್ಯಕ್ತಿಗಳು ಬಯಸುತ್ತಾರೆ. ಭೌತಿಕ ಅಸ್ತಿತ್ವದಿಂದ ತಪ್ಪಿಸಿಕೊಂಡು ಆತ್ಮೀಕ ಅಸ್ತಿತ್ವದೊಳಗೆ ಸೇರುವದಕ್ಕೆ ಬೇಕಾಗುವಂಥ ಆತ್ಮೀಕ ಹೊಳಪನ್ನು ಎಲ್ಲರೂ ಹೊಂದಿದ್ದಾರೆಂದು ನಂಬಲಾಗುವದಿಲ್ಲ. ಮರಣದ ವೇಳೆಯಲ್ಲಿ ಸತ್ಯವಾದ ಜ್ಞಾನವನ್ನು ಹೊಂದಿರುವವರು ಮಾತ್ರವೇ ಭೌತಿಕವಾದದ್ದನ್ನು ತೊರೆದು ಆತ್ಮೀಕ ಅಸ್ತಿತ್ವದೊಳಗೆ ಪ್ರವೇಶಿಸುವರು.

ಗ್ನಾಸ್ಟಿಕ್‌ರು ಯೇಸುವಿನ ಐತಿಹಾಸಿಕ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳು ಸೇರಿದಂತೆ ಆತನ ಶಾರೀರಿಕ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ. ಅವರ ಮನಸ್ಸುಗಳಲ್ಲಿ, ರಕ್ಷಣೆ ಎಂದರೆ ಪಾಪದಿಂದ ರಕ್ಷಣೆಯೆಂಬ ಅರ್ಥವಲ್ಲ, ಆದರೆ ಶಾರೀರಿಕ ಅಸ್ತಿತ್ವದಿಂದ ಬಿಡುಗಡೆ ಎಂದರ್ಥವಾಗಿರುತ್ತದೆ.

2. ಪೌಲನು ಎಸ್ಸೇನರ ಉಪದೇಶಗಳನ್ನು ಸೂಚಿಸಿ ಮಾತಾಡುತ್ತಿರುವ ಸಾಧ್ಯತೆಯಿದೆ. ಕೊಲೊಸ್ಸೆಯವರಿಗೆ ಪತ್ರಿಕೆಯ ಮೇಲಿನ ತನ್ನ ಅತ್ಯುತ್ಕೃಷ್ಟ ವ್ಯಾಖ್ಯಾನ ಗ್ರಂಥದಲ್ಲಿ, J. B. Lightfootನು ಒಂದು ಯೆಹೂದಿ ಧಾರ್ಮಿಕ ಪಂಥವಾಗಿದ್ದ ಎಸ್ಸೇನರ ಉಪದೇಶಗಳು ಕೊಲೊಸ್ಸೆಯಲ್ಲಿನ ಸಭೆಯೊಳಗೆ ನುಸುಳಿ ಬಂದಿದ್ದ ದೊಡ್ಡ ಪಾಷಂಡಮತವೆಂಬುದಕ್ಕೆ ಒಂದು ವಾದವನ್ನು ಮಂಡಿಸುತ್ತಾನೆ.[20] ಕೊಲೊಸ್ಸೆಯವರಿಗೆ ಪತ್ರಿಕೆ ಮತ್ತು ಎಸ್ಸೇನವಾದದ ನಡುವಿನ ಹೋಲಿಕೆಗಳನ್ನು ಎತ್ತಿ ತೋರಿಸಿದ ಬಳಿಕ, Donald Guthrie ಹೀಗೆ ಬರೆಯುತ್ತಾನೆ, "Lightfootನ ವಾದವು ಒಪ್ಪಿಕೊಳ್ಳಲ್ಪಡದಿದ್ದಾಗ್ಯೂ ಪ್ರಶ್ನೆಯಲ್ಲಿರುವ ಪಾಷಂಡಮತವು ಎರಡನೆಯ ಶತಮಾನದಲ್ಲಿ ವಿಕಾಸಗೊಂಡ ಗ್ನಾಸ್ಟಿಕ್‌ವಾದಕ್ಕಿಂತಲೂ ಎಸ್ಸೇನವಾದಕ್ಕೆ ಹೆಚ್ಚು ಹತ್ತಿರವಾಗಿರತ್ತದೆಂಬದನ್ನು ಅಲ್ಲಗಳೆಯುವದಕ್ಕೆ ಆಗುವದಿಲ್ಲವೆಂದು ತೋರುತ್ತದೆ."[21]

3. ಯೇಸುವಿನ ಕುರಿತ ಸುಳ್ಳು ಬೋಧನೆಯ ವಿಷಯದಲ್ಲಿ ಕೊಲೊಸ್ಸೆಯವರು ಚಿಂತಿತರಾಗಿದ್ದಿರಬಹುದು. ಪೌಲನು ಯೇಸುವಿನ ಸ್ವಭಾವದ ಕುರಿತು ಒತ್ತಿ ಹೇಳುತ್ತಾನೆ. ಆತನು ದೇವರ ಪ್ರತಿರೂಪದಲ್ಲಿರುವದಷ್ಟೆ ಅಲ್ಲ (1:15), ಆದರೆ ಆತನು ಸಮಸ್ತವನ್ನು ಸೃಷ್ಟಿಸಿದಾತನು ಸಹ ಆಗಿದ್ದಾನೆ (1:16, 17). ಆತನು ಸಮಸ್ತದಲ್ಲಿಯೂ ಸರ್ವೋಚ್ಚನಾಗಿದ್ದಾನೆ. ಆತನು ಸಭೆಯ ಮೇಲೆ ಶಿರಸ್ಸಾಗಿದ್ದಾನ, ಮತ್ತು ಆತನಲ್ಲಿ ಎಲ್ಲಾ ಪೂರ್ಣತೆಯು ಇರುತ್ತದೆ (1:18). ಆತನಲ್ಲಿಯೇ ದೇವತ್ವದ ಸರ್ವಸಂಪೂರ್ಣತೆಯು ವಾಸಿಸುತ್ತದೆ (2:9).

4. ಕ್ರೈಸ್ತರಲ್ಲಿ ಕೆಲವರು ತತ್ವಜ್ಞಾನದ ಕಡೆಗೆ ತಿರುಗಿಕೊಂಡಿದ್ದಿರಬಹುದು (2:8). ಕೊಲೊಸ್ಸೆಯವರಿಗೆ ಬೇರೆ ಉಪದೇಶವಾಗಲಿ ಅಥವಾ ಯೇಸುವನ್ನು ಬೇರೆ ಉಪದೇಶಕನಾಗಲಿ ಅಗತ್ಯವಿರುವದಿಲ್ಲ ಎಂದು ಪೌಲನು ಭರವಸೆ ನೀಡುತ್ತಾನೆ. ಆತನಲ್ಲಿಯೇ, ಕ್ರೈಸ್ತರು ಪರಿಪೂರ್ಣತೆಯನ್ನು ಹೊಂದಿದವರಾಗಿದ್ದಾರೆ (2:10).

5. ಕೆಲವರು ಯೆಹೂದಿ ವಿಚಾರದಿಂದ ಪ್ರಭಾವಿತರಾಗಿದ್ದಿರಬಹುದು. ಅದು ನಿಜವಾಗಿದ್ದಲ್ಲಿ, ಅವರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದರಿಂದ ಕ್ಷಮಾಪಣೆ ಸಿಕ್ಕುತ್ತದೆಂದು ಬೋಧಿಸಿದ್ದಿರುತ್ತಾರೆ. ಯೇಸುವು ಅವರನ್ನು ವಿಮೋಚಿಸಿ ಧರ್ಮಶಾಸ್ತ್ರದ ವಿಧಿಯನ್ನು ಅಳಿಸಿಹಾಕಿದನು (2:12-16) ಎಂದು ಪೌಲನು ಹೇಳಿದ್ದು ಯೆಹೂದ್ಯರ ಉಪದೇಶಕ್ಕೆ ಪ್ರತ್ಯುತ್ತರವಾಗಿದ್ದಿರಬಹುದಾಗಿದೆ.

6. ಕೆಲವೊಂದು ಯೆಹೂದಿ ಬೋಧಕರ ಪ್ರಭಾವಕ್ಕೊಳಗಾಗಿ, ಕೆಲವರು ದೇವದೂತರನ್ನು ಪೂಜಿಸುತ್ತಿದ್ದಿರಬಹುದಾಗಿದೆ (2:18). Phrygian ಪ್ರಾಂತ್ಯದಲ್ಲಿದ್ದ ಯೆಹೂದ್ಯರು ದೇವದೂತರೆಡೆಗೆ ಹೊಂದಿದ್ದ ಧೋರಣೆಯನ್ನು ಕುರಿತು F. F. Bruce ಚರ್ಚಿಸುತ್ತಾನೆ:

> ದೇವರು ಮತ್ತು ಮನುಷ್ಯನ ನಡುವಿನ ಸಂಹವನ ದಾರಿಗಳು [ದೇವದೂತರ] ನಿಯಂತ್ರಣದಲ್ಲಿದ್ದದರಿಂದ, ದೇವರಿಂದ ಬರುವ ಎಲ್ಲಾ ಪ್ರಕಟನೆ ಮತ್ತು ಮನುಷ್ಯನಿಂದ ಹೊರಡುವ ಎಲ್ಲಾ ಪ್ರಾರ್ಥನೆ ಹಾಗೂ ಆರಾಧನೆ ಅವರ ಮಧ್ಯಸ್ಥಿಕೆಯಿಂದ ಮತ್ತು ಅನುಮತಿಯಿಂದ ತಮ್ಮ ಗುರಿಯನ್ನು ತಲುಪುವವುಗಳಾಗಿದ್ದವು. ಹೀಗಿರುವದರಿಂದ ಅವರ ಕೃಪಾಕಟಾಕ್ಷವನ್ನು ಬೆಳೆಸಿಕೊಂಡು ಅವರು ಇಷ್ಟಪಡುವಂಥ ರೀತಿಯಲ್ಲಿ

ಸ್ವಾಮಿನಿಷ್ಠೆಯನ್ನು ನೀಡುವದು ಜಾಣತನವಾದ ಕೆಲಸವೆಂದು ಭಾವಿಸಲಾಗಿತ್ತು.[22]

ಇದರ ಜೊತೆಗೆ, ಧರ್ಮಶಾಸ್ತ್ರವನ್ನು ಕೊಡುವದಕ್ಕೆ ದೇವರು ದೇವದೂತರನ್ನು ಮಧ್ಯವರ್ತಿಗಳನ್ನಾಗಿ ಬಳಸಿದನೆಂದು ಅವರು ಬೋಧಿಸಿದರು. ಈ ಕಾರಣಕ್ಕಾಗಿ, ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದೆಂದರೆ ಅವರಿಗೆ ಮರ್ಯಾದೆಯನ್ನು ಸಲ್ಲಿಸುವದೆಂದರ್ಥವಾದರೆ, ಧರ್ಮಶಾಸ್ತ್ರವನ್ನು ಉಲ್ಲಂಘಿಸುವದು ಅವರಿಗೆ ಬೇಸರವನ್ನುಂಟು ಮಾಡಿದಂತೆ ಎಂದರ್ಥವಾಗುವದಾಗಿತ್ತು. ಈ ಸಿದ್ಧಾಂತದ ಪ್ರಕಾರ, ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಮೂಲಕ ಮತ್ತು ದೇಹವನ್ನು ಕಠೋರವಾಗಿ ನಿಗ್ರಹಿಸಿಕೊಳ್ಳುವ ಮೂಲಕ ದೇವದೂತರನ್ನು ಪ್ರಸನ್ನಗೊಳಿಸಬೇಕಾಗಿತ್ತು.

7. ಕೆಲವರು ಜೀವನದ ಕುರಿತು ಐಹಿಕವಾದ ದೃಷ್ಟಿಯನ್ನು ಅಂಗೀಕರಿಸಿಕೊಂಡಿದ್ದಿರಬಹುದು. ಒಂದು ವೇಳೆ ಇದು ಅವರು ಅನುಸರಿಸುವ ದಾರಿಯಾಗಿದ್ದಲ್ಲಿ, ಪೌಲನು ಇದನ್ನು "ಪ್ರಾಪಂಚಿಕ ಬಾಲಬೋಧನೆ" ಎಂಬ ಮಾತಿನಲ್ಲಿ ಹೇಳುತ್ತಾನೆ (2:8). ಕೆಲವರು ಅನ್ಯದೇವಾರಾಧನೆಯಿಂದ ಹೊರಗೆ ಬಂದವರಾಗಿದ್ದರು (ಅದರಲ್ಲಿ ಲೈಂಗಿಕ ಆಚಾರಗಳು ಸೇರಿದ್ದವು). ನೈತಿಕತೆಯ ಕುರಿತಾಗಿ ಅನ್ಯದೇವಾರಾಧನೆಯ ತತ್ವಜ್ಞಾನವು ಪ್ರಾಪಂಚಿಕತೆಯ ವಿರುದ್ಧ ಹೋರಾಡುವಂಥ ಯಾವದೇ ಸದೃಢವಾದ ಮಾನದಂಡಗಳನ್ನು ಒದಗಿಸದ್ದಾಗಿತ್ತು. ಇದು ಪೌಲನ ಕಳಕಳಿಯ ಭಾಗವಾಗಿದ್ದಿರಬಹುದಾಗಿದೆ (3:3-9).

8. *ಪೌಲನು syncretism* (ಸಮನ್ವಯವಾದ) *ಸಂಬಂಧಿಸಿದ ಒಂದು ಸಮಸ್ಯೆಯ ಬಗ್ಗೆ ಬರೆದಿರಬಹುದಾಗಿದೆ,* ಅಂದರೆ, ಯೆಹೂದಿ ಅತೀಂದ್ರಿಯ ಜ್ಞಾನವಾದ, ತತ್ವಜ್ಞಾನ, ಮತ್ತು ವಿಗ್ರಹಾರಾಧಕರ ನಿಗೂಢ ಕುಪಂಥಗಳಲ್ಲಿ ಸಿಕ್ಕುವ ವಿವಿಧ ನಂಬಿಕೆಗಳ ಮತ್ತು ಧಾರ್ಮಿಕ ಉಪದೇಶಗಳನ್ನು ಒಂದಾಗಿ ಮಿಶ್ರಣಗೊಳಿಸುವದಾಗಿದೆ. Clinton E. Arnoldನು ಇದೇ ಸಮಸ್ಯೆಯಾಗಿತ್ತೆಂಬ ನಿರ್ಧಾರಕ್ಕೆ ಬರುತ್ತಾನೆ:

> ಸಭೆಯ ಆರೋಗ್ಯಕ್ಕೆ ಅಪಾಯಕರ ಮತ್ತು ಕ್ರಿಸ್ತನ ವ್ಯಕ್ತಿತ್ವಕ್ಕೆ ಅವಹೇಳನಕರವೆಂದು ಅಪೊಸ್ತಲನು ಭಾವಿಸಿಕೊಂಡ ಒಂದು ತದ್ವಿರುದ್ಧವಾದ ಬೋಧನೆಯ ಅಪಾಯವು ಕಂಡದ್ದರಿಂದ ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಬರೆಯುವಂತೆ ಪ್ರಚೋದನೆಯಾಗಿತ್ತು. syncretistic "ತತ್ವಜ್ಞಾನ"ವು ಕೊಲೊಸ್ಸೆಯವರಿಗೆ ಒಂದು ಮರುಳುಗೊಳಿಸುವಿಕೆ ಆಗಿತ್ತು ಯಾಕೆಂದರೆ ಅದು ಅವರಿಗೆ ಭೂಕೆಳಗಿನ [ಭೂಗತ ಜಗತ್ತಿನ] ಆತ್ಮಗಳ, ತಾರಾಲೋಕದ [ಆಕಾಶದ, ಅತಿಮಾನುಷ] ಶಕ್ತಿಗಳ, ಮತ್ತು ಎಲ್ಲಾ ವಿಧವಾದ ದುಷ್ಟ ಆತ್ಮಗಳ ಹಾನಿಕಾರಕ ಪ್ರಭಾವವನ್ನು ತಪ್ಪಿಸಿಕೊಳ್ಳುವದಕ್ಕೆ ಹೆಚ್ಚುವರಿ ದಾರಿಗಳನ್ನು ಮುಂದಿಡುವದಾಗಿತ್ತು.[23]

ಪಾಷಂಡ ಮತಗಳು ಇದ್ದದ್ದೇ ಆಗಿದ್ದರೆ, ಯಾವು ಕೊಲೊಸ್ಸೆಯ ಸಭೆಯೊಳಗೆ ಯಾವು ನುಸುಳಿತ್ತು ಎಂಬದು ನಮಗೆ ಖಚಿತವಾಗಿ ತಿಳಿಯದಾದರೂ, ಮೇಲ್ಗಡೆ ಉಲ್ಲೇಖಿಸಲಾಗಿರುವ ಯಾವದೇ ಸಮಸ್ಯೆಗಳ ವಿಷಯದಲ್ಲಿ ಕ್ರಮ ಕೈಗೊಳ್ಳುವದಕ್ಕೆ ಪೌಲನ ಪತ್ರಿಕೆಯು ಉಪದೇಶಗಳನ್ನು ನಮಗೆ ಒದಗಿಸಿರುತ್ತದೆ.

# ಉದ್ದೇಶ ಮತ್ತು ಪ್ರಮುಖ ಚರ್ಚೆಯಾಂಶಗಳು

## ಉದ್ದೇಶ

ಒಬ್ಬನು ಕೊಲೊಸ್ಸೆಯಲ್ಲಿನ ಪಾಷಂಡ ಮತದ ಕುರಿತು ಹೊಂದಿರುವ ಅಭಿಪ್ರಾಯದ ಮೇಲೆ ಪತ್ರಿಕೆಯ ಉದ್ದೇಶವು ಅವಲಂಭಿತವಾಗಿರುತ್ತದೆ. ಕೊಲೊಸ್ಸೆಯ ಸಭೆಯಲ್ಲಿ ಪಾಷಂಡ ಮತವು ಉದ್ಭವವಾಗಿದ್ದಲ್ಲಿ, ಪೌಲನು ಪತ್ರಿಕೆಯನ್ನು ಬರೆಯುವ ಉದ್ದೇಶವು ಕ್ರಿಸ್ತನಿಗೆ ನಂಬಿಗಸ್ತರಾಗಿರಬೇಕೆಂದು ಅವರನ್ನು ಎಚ್ಚರಿಸುವದೇ ಆಗಿತ್ತು. ಒಂದು ಪಾಷಂಡ ಮತವು ಇನ್ನೂ ಉದ್ಭವವಾಗಿಲ್ಲವೆಂದಾದರೆ, ಆತನು ಅವರನ್ನು ಕ್ರಿಸ್ತನನ್ನು ಬಿಟ್ಟು ಬೇರೆ ದಾರಿ ಹಿಡಿಯದೆ ಇರಬೇಕೆಂದು ಎಚ್ಚರಿಸಲು ಮತ್ತು ಆತನು ಸಮಸ್ತಕ್ಕಿಂತ ಉನ್ನತನು ಮತ್ತು ಎಲ್ಲಾ ಕ್ರೈಸ್ತರಿಗೆ ಅಗತ್ಯವಾದವನು ಎಂಬ ಭರವಸೆಯನ್ನ ನೀಡುವದಕ್ಕೆ ಬರೆದನು.

ಯಾವದೇ ಸುಳ್ಳು ಬೋಧನೆಯು ಅವರನ್ನು ಯೇಸುವಿನಿಂದ ದೂರಕ್ಕೆ ಕೊಂಡೊಯ್ಯದಂತೆ ತಡೆಗಟ್ಟಬೇಕೆಂಬುದು ಪೌಲನು ಬಯಕೆಯಾಗಿತ್ತು. ಸಭೆಯು ಎಳೆಯದ್ದಾಗಿತ್ತು. ಸದಸ್ಯರನ್ನು ಅವರು ಎದುರಿಸಬಹುದಾದ ಹಾನಿಕಾರಕ ಸಂಗತಿಗಳ ಬಗ್ಗೆ ಎಚ್ಚರಿಸುವ ಅಗತ್ಯವಿತ್ತು. ಅವರು ಯೇಸುವನ್ನು ಕರ್ತನೆಂದು ಸಂತೋಷದಿಂದ ಅಂಗೀಕರಿಸಿಕೊಂಡಿದ್ದರು ಮತ್ತು ನಂಬಿಗಸ್ತ ಕ್ರೈಸ್ತ ಜೀವಿತವನ್ನು ಜೀವಿಸುವ ದಾರಿಯಲ್ಲಿರುವಂತೆ ಕಂಡರು; ಹೇಗೂ, ಮುಂದೆ ಅಪಾಯಗಳಿದ್ದವು. ಕೆಲವರು ಅವರನ್ನು ಯೇಸುವಿನ ಉಪದೇಶಗಳಿಗಿಂತಲೂ ಬೇರೆ ಇನ್ನಷ್ಟು ಉಪದೇಶಗಳನ್ನು ಸ್ವೀಕರಿಸಿಕೊಳ್ಳುವಂತೆ ಮನವೋಲಿಸಬಹುದಿತ್ತು. ಯೇಸು ದೇವರಿಗಿಂತಲೂ ಕಡಿಮೆಯಾಗಿದ್ದವನು ಎಂದು ಸದಸ್ಯರು ಹೇಳಲಾರಂಭಿಸಬಹುದಿತ್ತು. ಅವರು ಬೀಳಬಹುದಾಗಿದ್ದ ಇತರ ಅಪಾಯದ ಕಂದಕಗಳೆಂದರೆ ಐಹಿಕತೆ, ಅನೈತಿಕತೆ, ಅಥವಾ ಆತ್ಮೀಕತೆಯ ಕೊರತೆ.

ಪೌಲನ ಉದ್ದೇಶವು ಕ್ರಿಸ್ತನು ಸರ್ವೋಚ್ಚನಾದವನು ಎಂಬದನ್ನು ಒತ್ತಿ ಹೇಳುವದೇ ಆಗಿತ್ತು. ಆತನಿಂದ ಬರದಂಥ ಯಾವದೇ ಉಪದೇಶವು ವಿನಾಶಕಾರಿಯಾದದ್ದು. ಆತನು ಸಂಪೂರ್ಣವಾಗಿ ದೇವರು ಮತ್ತು ಕ್ರೈಸ್ತನ ಆತ್ಮೀಕ ಅಗತ್ಯತೆಗಳನ್ನು ಸಂಪೂರ್ಣವಾಗಿ ಒದಗಿಸುವವನು. ಈ ಕಾರಣಕ್ಕಾಗಿ, ಅವರು ತಪ್ಪಿಸಿಕೊಂಡು ಬಂದಿದ್ದಂಥ ಯೆಹೂದಿ ಹಾಗೂ ವಿಗ್ರಹಾರಾಧಕ ಸಂಸ್ಕೃತಿಗಳ ಅಥವಾ ಗ್ರೀಕ್ ತತ್ವಜ್ಞಾನಗಳ ಆಕರ್ಷಣೆಯಿಂದ ಪ್ರಭಾವಿತರಾಗಬಾರದೆಂದು ಪೌಲನು ಅವರನ್ನು ಎಚ್ಚರಿಸಿದನು. ಆತನು ಅವರನ್ನು ಲೋಕದ ಅನೈತಿಕ ಆಚಾರಗಳಿಗೆ ಸತ್ತವರಾಗಿರ್ರಿ ಮತ್ತು ಪರಲೋಕದ ಕಾರ್ಯಗಳಿಗೆ ಜೀವದಿಂದಿರ್ರಿ ಎಂದು ಪ್ರೋತ್ಸಾಹಿಸಿದನು. ಆತನು ಅವರ ಮುಂದೆ ಇಟ್ಟ ಗುರಿಯು ಏನೆಂದರೆ ಮೇಲಿರುವವುಗಳ ಮೇಲೆ ಗಮನವಿಡುವದು ಮತ್ತು ತಮ್ಮ ಮನೆಯ ಜವಾಬ್ದಾರಿಗಳನ್ನು ನಂಬಿಗಸ್ತರಾಗಿ ನೆರವೇರಿಸುವದು.

ಪತ್ರಿಕೆಯು ಒಂದು ಸುರಕ್ಷಾಕವಚದಂತೆ, ಕ್ರಿಸ್ತನನ್ನು ಹಿಂಬಾಲಿಸಿ ಇತರ ಯಾವದೇ ಆಚಾರಗಳಿಂದ ದೂರವಿರಬೇಕೆಂದು ಪ್ರೋತ್ಸಾಹಿಸುವದಕ್ಕೆ ಕಳುಹಿಸಲ್ಪಟ್ಟಿತ್ತು. ಕ್ರಿಸ್ತನಿಗೆ ನಿಷ್ಠೆಯಿಂದ ಉಳಿದು ಅವರ ಸಂಸ್ಕೃತಿಯ ಭಕ್ತಿಹೀನವಾದ ತತ್ವಜ್ಞಾನಗಳಿಂದ, ಸಂಪ್ರದಾಯಗಳಿಂದ, ಮತ್ತು ಆಚಾರಗಳಿಂದ ದೂರವಿರಬೇಕೆಂದು ಪೌಲನು ಅವರಿಗೆ ಕರೆ

ಕೊಡುತ್ತಾನೆ.

## ಪ್ರಮುಖ ಚರ್ಚೆಯಾಂಶಗಳು

ಕೊಲೊಸ್ಸೆಯವರಿಗೆ ಪುಸ್ತಕವು, ಒಂದು ಕ್ಲುಪ್ತವಾದ ಪುಸ್ತಕವಾಗಿದ್ದರೂ, ಬೈಬಲಿನ ಪ್ರಾಮುಖ್ಯವಾದ ಅನೇಕ ಚರ್ಚೆಯಾಂಶಗಳನ್ನು ಒಳಗೊಂಡಿರುತ್ತದೆ. ಇದು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲೂ ಕಂಡುಬರದಂಥ ಅತ್ಯಂಥ ಕಡಿಮೆಯಾದದ್ದನ್ನು ಒಳಗೊಂಡಿರುತ್ತದೆ. ಇದು ಕೊಲೊಸ್ಸೆಯಲ್ಲಿದ್ದ ಸಭೆಗೆ ಎದುರಾಗಿದ್ದ ಮತ್ತು ಅದರ ನಂತರ ಕ್ರೈಸ್ತ ಪೀಳಿಗೆಗಳನ್ನು ಬಾಧಿಸಿರುವ ಹಲವಾರು ಸಿದ್ಧಾಂತಿಕ, ನೈತಿಕ, ಮತ್ತು ಸಾಮಾಜಿಕ ಸಮಸ್ಯೆಗಳ ಸಂಕ್ಷಿಪ್ತ ಸಂಗ್ರಹವಾಗಿರುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಐದು ಪ್ರಮುಖ ಚರ್ಚೆಯಾಂಶಗಳು ಪುಸ್ತಕದಲ್ಲಿ ಪ್ರಧಾನವಾಗಿ ಕಂಡು ಬರುತ್ತವೆ:

1. ಪೌಲನು ಮತ್ತು ಸಹೋದರರು. ಪೌಲನು ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ತನ್ನ ಪ್ರಯಾಣದ ಸಹಪಾಠಿಗಳಲ್ಲಿ ಹಲವರ ಹೆಸರುಗಳನ್ನು ಉಲ್ಲೇಖಿಸುತ್ತಾನೆ: ತಿಮೊಥೆ, ಎಪಫ್ರನು, ಅರಿಸ್ತಾರ್ಕನು, ಮಾರ್ಕ, ಬಾರ್ನಬ, ಯೂಸ್ತನು, ಲೂಕ, ಮತ್ತು ದೇಮನು (1:1; 4:10-14). ಆತನು ಯೇಸುವಿನ ಹಿಂಬಾಲಕರ ಮೇಲಿರುವ ತನ್ನ ಪ್ರೀತಿಯನ್ನು, ಮಾತ್ರವಲ್ಲದೆ ತನ್ನ ಸಂಗಡ ಇದ್ದವರ ಕಳಕಳಿ ಹಾಗೂ ಮಮತೆಯನ್ನು ಸಹ ಪ್ರಕಟಗೊಳಿಸಿದನು.

ಪೌಲನು ತನಗೆ ಪರಿಚಯವಿದ್ದ ಜನರಲ್ಲಿ ಆಸಕ್ತಿಯನ್ನು ಹೊಂದಿದ್ದನೆಂಬುದು ಮಾತ್ರವಲ್ಲದೆ, ತಾನು ಎಂದಿಗೂ ನೋಡಿರದ ಜೊತೆ ಕ್ರೈಸ್ತರಿಗೆ ಸಹ ತಾನು ಹಂಗಿನಲ್ಲಿದ್ದೇನೆಂದು ಭಾವಿಸಿಕೊಂಡನು. ಆತನು ಕೊಲೊಸ್ಸೆಯವರಿಗಾಗಿ ಪ್ರಾರ್ಥಿಸುವದನ್ನು ಮುಂದುವರೆಸಿದನು ಮತ್ತು ಅವರಲ್ಲಿ ಆತ್ಮೀಕ ಬೆಳವಣಿಗೆ ಮತ್ತು ಕ್ರಿಸ್ತನೆಡೆಗೆ ಅತ್ಯಾಸಕ್ತಿಯ ಭಕ್ತಿಯನ್ನು ಅಭಿವೃದ್ಧಿಗೊಳಿಸುವದಕ್ಕೆ ಅಪೇಕ್ಷಿಸಿದನು (1:1-14). ತಾನು ಸಿದ್ಧಿಗೆ ಬರುವಂತಾಗಲು ಮತ್ತು ಎಲ್ಲಾ ವಿಶ್ವಾಸಿಗಳನ್ನು ಸ್ಥಿರಪಡಿಸುವಂತಾಗಲು ಮತ್ತು ನಾಶನದಲ್ಲಿರುವವರಿಗೆ ಯೇಸುವಿನ ಮೂಲಕ ಸಿಕ್ಕುವದ ದೇವರ ಆಶೀರ್ವಾದಗಳ ಮರ್ಮವನ್ನು ಹಂಚಿಕೊಳ್ಳುವಂತಾಗಲು ಆತನು ಬಾಧೆಗಳನ್ನು ಸಹಿಸಿಕೊಂಡನು (1:24-29).

2. ಉನ್ನತಕ್ಕೇರಿಸಲ್ಪಟ್ಟ ಕ್ರಿಸ್ತನು. ಪೌಲನ ಪ್ರಕಾರವಾಗಿ, ಎಲ್ಲಾ ನಿಜವಾದ ಬೋಧನೆಗೆ ತಳಹದಿಯೆಂದರೆ ಯೇಸುವಿನ ಶ್ರೇಷ್ಠತೆ ಮತ್ತು ಅಧಿಕಾರವೇ. ಆತನು ದೇವರ ಪ್ರತಿರೂಪನು, ಸೃಷ್ಟಿಕರ್ತನು, ಎಲ್ಲರ ಮೇಲೆ ಆಳ್ವಿಕೆ ಮಾಡುವವನು, ಮತ್ತು ಆತನು ಸಭೆಯ ಶಿರಸ್ಸು ಆಗಿದ್ದಾನೆ (1:15-18). ಶಿಲುಬೆಯ ಮೇಲೆ ಸುರಿಸಲ್ಪಟ್ಟ ತನ್ನ ರಕ್ತದ ಮೂಲಕ, ಆತನು ದೇವರ ಸಂಗಡ ಸಂಧಾನಗೊಳ್ಳುವದನ್ನು ಸಾಧ್ಯಗೊಳಿಸಿದನು (1:20-23). ಎಲ್ಲಾ ನಿಜವಾದ ಜ್ಞಾನ (2:3) ಮತ್ತು ದೇವರ ಸರ್ವಸಂಪೂರ್ಣತೆ ಕ್ರಿಸ್ತನಲ್ಲಿರುತ್ತವೆ (2:9, 10).

ಕೊಲೊಸ್ಸೆಯವರು ಮನುಷ್ಯ ಕಲ್ಪಿತ ಜ್ಞಾನ ಮತ್ತು ಉಪದೇಶಗಳ ಕಡೆಗೆ ತಿರುಗಿಕೊಳ್ಳದಂತೆ ಅವರನ್ನು ಎಚ್ಚರಿಸುವದಕ್ಕಾಗಿ ಪೌಲನು ಯೇಸುವಿನ ಕುರಿತಾದ ಈ ಸತ್ಯಗಳನ್ನು ತಿಳಿಯಪಡಿಸಿದನು. ಅವರು ಯೇಸು ಸತ್ಯವಂತರಾಗಿ ನೆಲೆಗೊಂಡು, ಆತನನ್ನು ಹಿಡಿದುಕೊಂಡಿರಬೇಕಿತ್ತು ಮತ್ತು ಮನುಷ್ಯ ಕಲ್ಪಿತ ತತ್ವಜ್ಞಾನಗಳನ್ನು ಮತ್ತು

ನಿಯಮಗಳನ್ನು ಅಥವಾ ನಿಗೂಢ ಧರ್ಮಗಳ ಆಚಾರಗಳನ್ನು ಅನುಸರಿಸುವ ಮೂಲಕ ತಮ್ಮ ಪ್ರತಿಫಲದಿಂದ ವಂಚಿತರಾಗದಂತೆ ಇರತಕ್ಕದ್ದು (2:4-8, 18-23). ಅಲ್ಲದೆ ಧರ್ಮಶಾಸ್ತ್ರವು ಅವರ ಜೀವನಕ್ಕೆ ಮಾರ್ಗದರ್ಶಿಯಾಗಿರಕೂಡದು, ಯಾಕೆಂದರೆ ಅದು ಯೇಸುವಿನ ಶಿಲುಬೆಗೆ ಜಡಿಯಲ್ಪಟ್ಟಿದೆ (2:14-17).

3. ಕ್ರಿಸ್ತನಲ್ಲಿ ಹೊಸಬರು. ಸರ್ವಕ್ಕೂ ಸಾಕಾಗುವ ಕ್ರಿಸ್ತನ ಕಾರಣದಿಂದ, ಕೊಲೊಸ್ಸೆಯವರು ತಮ್ಮ ಪಾಪಗಳು ಕ್ಷಮಿಸಲ್ಪಡುವಂತಾಗಲು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಆತನೊಂದಿಗೆ ಹೂಣಲ್ಪಟ್ಟು ಪುನರುತ್ಥಾನಗೊಳ್ಳು ಮೂಲಕ ಹೊಸಬರಾಗಿ ಮಾಡಲ್ಪಟ್ಟಿರುತ್ತಾರೆ (2:11-13). ಅವರು ಯೇಸುವಿನೊಂದಿಗೆ ತೊಡಗಿಸಿಕೊಂಡಿದ್ದು ಒಂದು ಜೀವಿತ-ಮಾರ್ಪಡುವ ಪರಿಣಾಮವನ್ನು ಅನುಭವಿಸುವದಕ್ಕಾಗಿಯೇ ಆಗಿತ್ತು. ಅವರು ಕ್ರಿಸ್ತನ ಸಂಗಡ ಮರಣಿಸಿದ್ದರು (2:20) ಮತ್ತು ಆತನೊಂದಿಗೆ ಎಬ್ಬಿಸಲ್ಪಟ್ಟಿದ್ದರು (3:1-3). ಈ ಕಾರಣಕ್ಕಾಗಿ, ಜೀವನದಲ್ಲಿನ ಅವರ ದಿಶೆ ಮತ್ತು ಉದ್ದೇಶಗಳು ಬದಲಾವಣೆಗೊಳ್ಳಲಿದ್ದವು. ಅವರು ಜೀವನ ಮಾಡುವ ರೀತಿಯು ವ್ಯತ್ಯಾಸವಾಗಿರಲಿತ್ತು. ಅವರು ಅನೈತಿಕ ಆಚಾರಗಳನ್ನು ಅಂತ್ಯಗೊಳಿಸಿ ಭಕ್ತಿಹೀನ ಗುಣಗಳನ್ನು ಜಯಿಸುವವರಾಗಿದ್ದರು (3:5-9). ಅವರು ಯೇಸುವಿನಲ್ಲಿರುವ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕಿತ್ತು (3:10-14). ಅದರ ಫಲಿತವು ಒಂದೇ ದೇಹದಲ್ಲಿ ಐಕ್ಯತೆಯಾಗಿರಲಿತ್ತು (3:15).

ಕ್ರಿಸ್ತನಲ್ಲಿ ಶ್ರೇಷ್ಠ ಆಶೀರ್ವಾದಗಳನ್ನು ಪಡೆದುಕೊಂಡವರಾಗಿ, ಕೊಲೊಸ್ಸೆಯವರು ತಮ್ಮ ಹೃದಯಗಳ ಜೊತೆಗೂಡಿ ದೇವರನ್ನು ಹಾಡುಗಳಿಂದ ಸ್ತುತಿಸಬಹುದಿತ್ತು (3:16), ಅವರು ಕ್ರಿಸ್ತನಿಗೆ ಮೆಚ್ಚಿಕೆಯಾಗಿ—ತಮ್ಮ ಮಾತುಗಳಲ್ಲಿ ಮಾತ್ರವೇ ಅಲ್ಲ, ಆದರೆ ತಮ್ಮ ಕೃತ್ಯಗಳಲ್ಲಿ ಸಹ — ಇರಬೇಕಿತ್ತು (3:17).

4. ಸಂಸಾರಿಕ ಪರಿಗಣನೆಗಳು. ಇತರರೊಂದಿಗಿನ ಅವರ ಸಂಬಂಧಗಳು ಯೇಸುವಿನ ಮೂಲತತ್ವಗಳ ಮಾರ್ಗದರ್ಶನದಲ್ಲಿರಬೇಕಿತ್ತು. ಗಂಡಂದಿರು ಮನೆಗಳಲ್ಲಿ ನಾಯಕರಾಗಿರಬೇಕಿತ್ತು, ಹೆಂಡತಿಯರು ತಮ್ಮ ಗಂಡಂದಿರಿಗೆ ಸಹಕಾರವನ್ನು ನೀಡಬೇಕಿತ್ತು, ಮಕ್ಕಳು ತಮ್ಮ ತಂದೆತಾಯಿಗಳಿಗೆ ವಿಧೇಯರಾಗಬೇಕಿತ್ತು, ದಾಸರು ತಮ್ಮ ಯಜಮಾನರಿಗೆ ವಿಧೇಯರಾಗಬೇಕಿತ್ತು, ಮತ್ತು ಯಜಮಾನರು ತಮ್ಮ ದಾಸರ ವಿಷಯದಲ್ಲಿ ನೀತಿಯಿಂದಲೂ ನ್ಯಾಯದಿಂದಲೂ ನಡೆದುಕೊಳ್ಳಬೇಕಿತ್ತು (3:18-4:1).

5. ಕ್ರಿಸ್ತನಲ್ಲಿ ಕ್ಷಮಾಪಣೆ. ಪೌಲನು 1:14ರಲ್ಲಿ ಪಾಪಗಳ ಕ್ಷಮಾಪಣೆಯನ್ನು ಪರಿಚಯಿಸಿದನು ಮತ್ತು ಆ ಕ್ಷಮಾಪಣೆಯೊಳಗೆ ಪ್ರವೇಶಿಸುವದನ್ನು ಕುರಿತು 2:11-13ರಲ್ಲಿ ಚರ್ಚಿಸಿದನು. ಆತನು ಇಬ್ಬರು ಪ್ರೇರಿತ ಲೇಖಕರ ಹೆಸರುಗಳನ್ನು ಉಲ್ಲೇಖಿಸಿದನು, ಅವರು ಸುವಾರ್ತೆಯ ಕಥನವನ್ನು ಬರೆದವರಾದ ಮಾರ್ಕ ಮತ್ತು ಲೂಕ (4:10, 14). ಅವರ ಬರವಣಿಗೆಗಳಲ್ಲಿ ಈ ಶ್ರೇಷ್ಠ ಚರ್ಚೆಯಾಂಶದ ಕುರಿತು ಯೇಸುವಿನ ಮತ್ತು ಆದಿ ಸಭೆಯ ಬೋಧನೆಗಳನ್ನು ಒಳಗೊಂಡಿರುತ್ತವೆ.

ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವ ಮೂಲಕ, ಕ್ರೈಸ್ತರು ಯೇಸುವಿನ ಕುರಿತಾಗಿ ಆಳವಾದ ತಿಳುವಳಿಕೆಯನ್ನು ಪಡೆದುಕೊಂಡವರಾಗಿ ಆತನನ್ನು ಹಿಂಬಾಲಿಸುವಂತೆ ಸ್ಪೂರ್ತಿಗೊಳಿಸಲ್ಪಡತಕ್ಕದ್ದು. ನಾವು

ಆತನು ಯಾರಾಗಿದ್ದಾನೆ ಮತ್ತು ಇಲ್ಲಿ ಸಂತೋಷದ ಹಾಗೂ ಪ್ರಯೋಜನಕರವಾದ ಜೀವಿತಗಳನ್ನು ಜೀವಿಸುವಂತಾಗಲು ಹಾಗೂ ಪರಲೋಕದಲ್ಲಿ ನಾವು ಆತನೊಂದಿಗೆ ಜೀವಿಸುವಂತಾಗಲು ಆತನು ಮಾಡಿರುವಂತ ಕಾರ್ಯಕ್ಕಾಗಿ ಆತನನ್ನು ಗೌರವಿಸುವವರಾಗಬೇಕು.

## ಸಂಕ್ಷಿಪ್ತ ವರ್ಣನೆ

I. ವಂದನೆ (1:1, 2)
- A. ಪೌಲ ಮತ್ತು ತಿಮೊಥೆಯಿಂದ (1:1)
- B. ಕೊಲೊಸ್ಸೆಯ ನಂಬಿಗಸ್ತರಾದ ಸಹೋದರರಿಗೆ (1:2)

II. ಕೊಲೊಸ್ಸೆಯವರಿಗಾಗಿ ಪೌಲನು ಸ್ತೋತ್ರ ಮಾಡಿದ್ದು (1:3-8)
- A. ಒಂದು ಸ್ತೋತ್ರಾರ್ಪಣೆಯ ಪ್ರಾರ್ಥನೆ (1:3)
- B. ಅವರ ನಂಬಿಕೆ ಮತ್ತು ಪ್ರೀತಿ (1:4)
- C. ಅವರ ಪರಲೋಕದ ಕುರಿತ ನಿರೀಕ್ಷೆ (1:5)
- D. ಅವರ ನಂಬಿಕೆಯಿಂದುಂಟಾದ ಫಲ (1:6)
- E. ಎಪಫ್ರನ ವರದಿ (1:7, 8)

III. ಕೊಲೊಸ್ಸೆಯವರಿಗಾಗಿ ಪೌಲನ ಪ್ರಾರ್ಥನೆ (1:9-14)
- A. ಅವರ ಜ್ಞಾನ ಮತ್ತು ತಿಳುವಳಿಕೆ (1:9)
- B. ಕ್ರೈಸ್ತರ ನಡೆ ಮತ್ತು ಫಲ ಕೊಡುವಿಕೆ (1:10)
- C. ಅವರ ಆತ್ಮೀಕ ಬಲ (1:11, 12a)
- D. ಬೆಳಕಿನ ರಾಜ್ಯದೊಳಗೆ ಅವರ ಪ್ರವೇಶ (1:12b, 13)
- E. ಕ್ರಿಸ್ತನಲ್ಲಿ ಅವರ ಮತ್ತು ನಮ್ಮ ಕ್ಷಮಾಪಣೆ (1:14)

IV. ಕ್ರಿಸ್ತನ ಶ್ರೇಷ್ಠತೆಯ ಒಂದು ಬಣ್ಣನೆ (1:15 -20)
- A. ಅದೃಶ್ಯನಾದ ದೇವರ ಪ್ರತಿರೂಪ ಮತ್ತು ಸೃಷ್ಟಿಗೆಲ್ಲಾ ಜೇಷ್ಠಪುತ್ರನು (1:15)
- B. ಸರ್ವವೂ ಆತನಿಂದ ಸೃಷ್ಟಿಸಲ್ಪಟ್ಟವು (1:16)
- C. ಸಮಸ್ತಕ್ಕೂ ಆಧಾರಭೂತನು (1:17)
- D. ಸಭೆಯ ಶಿರಸ್ಸು ಮತ್ತು ಸರ್ವೋನ್ನತನು (1:18, 19)
  1. ಸಭೆಯ ಶಿರಸ್ಸು (1:18a)
  2. ಸೃಷ್ಟಿಯ ಮೂಲಾಧಾರನು (1:18b)
  3. ಸತ್ತವರೊಳಗಿಂದ ಮೊದಲು ಎದ್ದು ಬಂದವನು (1:18b)
  4. ಎಲ್ಲಾದರಲ್ಲಿಯೂ ಪ್ರಮುಖನು (1:18c)
  5. ಆತನಲ್ಲಿ ಸರ್ವಸಂಪೂರ್ಣತೆ (1:19)
- E. ಸಮಾಧಾನ ಉಂಟಾಗುವದಕ್ಕೆ ತಳಹದಿ (1:20)

V. ಕ್ರಿಸ್ತನ ಮೂಲಕ ಸಂಧಾನವುಂಟಾಗುತ್ತದೆಂದು ಪೌಲನು ನೀಡುವ ಭರವಸೆ (1:21-23)

A. ಅವರ ಹಿಂದಿನ ಕಾಲದ ಸ್ಥಿತಿ (1:21)
B. ಕ್ರಿಸ್ತನ ಮರಣದ ಮೂಲಕ ಅವರಿಗಾದ ಸಂಧಾನ (1:22)
C. ಅವರ ನಂಬಿಗಸ್ತಿಕೆಯ ಅಗತ್ಯತೆ (1:23)

VI. ಪೌಲನು ಕೊಲೊಸ್ಸೆಯವರಿಗೋಸ್ಕರ ಪಟ್ಟ ಪ್ರಯಾಸಗಳು (1:24-29)

A. ಆತನ ಸಂತೋಷ: ಅವರಿಗೋಸ್ಕರ ಬಾಧೆ ಅನುಭವಿಸುವದು (1:24)
B. ಅವರಿಗೆ ಪ್ರಕಟಗೊಳಿಸಲ್ಪಟ್ಟ ಮರ್ಮ (1:25-27)
C. ಆತನು ಅವರಿಗಾಗಿ ಹೊಂದಿದ್ದ ಗುರಿ: ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದು (1:28, 29)

VII. ಪೌಲನ ಘೋಷಣೆ: ಕ್ರಿಸ್ತನು, ಜ್ಞಾನ ಮತ್ತು ತಿಳುವಳಿಕೆಗೆ ಮೂಲಧಾರನು (2:1-7)

A. ಆತನ ಅಪೇಕ್ಷೆ: ಅವರು ದೇವರ ಮರ್ಮದ ಪೂರ್ಣಜ್ಞಾನ ಹೊಂದಬೇಕೆಂಬುದು (2:1, 2)
B. ಆತನ ಪ್ರಕಟಗೊಳಿಸುವಿಕೆ: ಕ್ರಿಸ್ತನಲ್ಲಿ ಎಲ್ಲಾ ಜ್ಞಾನ ಮತ್ತು ವಿದ್ಯೆ (2:3, 4)
C. ಆತನ ಸಂತೋಷ: ಕ್ರಿಸ್ತನಲ್ಲಿ ಅವರ ನಂಬಿಕೆ (2:5)
D. ಆತನ ಬುದ್ಧಿವಾದ: ಅವರು ಕ್ರಿಸ್ತನನ್ನು ಅಂಗೀಕರಿಸಿದ್ದಂತೆಯೇ ಆತನಲ್ಲಿದ್ದವರಾಗಿ ನಡೆಯುವದು (2:6)
E. ಆತನ ಪ್ರೋತ್ಸಾಹ: ಕ್ರಿಸ್ತನಲ್ಲಿ ಭಕ್ತಿವೃದ್ಧಿಗೊಳ್ಳುವದು (2:7)

VIII. ಕ್ರಿಸ್ತನ ಸರ್ವಸಂಪೂರ್ಣತೆಯ ಕುರಿತ ಪೌಲನ ಚಿತ್ರಣ (2:8-15)

A. ಮನುಷ್ಯ ಉಪದೇಶಗಳಿಗೆ ವಶವಾಗದಿರುವಿಕೆ (2:8)
B. ಕ್ರಿಸ್ತನಲ್ಲಿ ಅವತರಿಸಿ ವಾಸಮಾಡುವ ದೇವತ್ವ (2:9)
C. ಕ್ರಿಸ್ತನಲ್ಲಿ ಪರಿಪೂರ್ಣತೆ (2:10, 11)
D. ಕ್ರಿಸ್ತನಲ್ಲಿ ಜೀವ ಮತ್ತು ಕ್ಷಮಾಪಣೆ (2:12, 13)
E. ಧರ್ಮಶಾಸ್ತ್ರ ವಿಧಿಗಳಿಂದ ಕ್ರಿಸ್ತನಲ್ಲಿ ಸ್ವಾತಂತ್ರ್ಯ (2:14)
F. ಕ್ರಿಸ್ತನಿಂದ ವಿರೋಧಿಯ ಬಯಲುಗೊಳಿಸಲ್ಪಡುವಿಕೆ (2:15)

IX. ಶಿರಸ್ಸಿಗೆ ಗಟ್ಟಿಯಾಗಿ ಅಂಟಿಕೊಂಡಿರಬೇಕೆಂದು ಪೌಲನ ಬುದ್ಧಿವಾದ (2:16-23)

A. ಧರ್ಮಶಾಸ್ತ್ರದ ಬದಲಾಗಿ ಕ್ರಿಸ್ತನನ್ನು ಅನುಸರಿಸುವದು (2:16, 17)
B. ಮನುಷ್ಯ ಸಂಪ್ರದಾಯಗಳಿಂದ ದೂರವಿರುವದು (2:18, 19)
C. ಪ್ರಪಂಚದ ಬಾಲಬೋಧೆಯ ಪಾಲಿಗೆ ಕ್ರಿಸ್ತನೊಂದಿಗೆ ಸಾಯುವದು (2:20-23)

X. ಕ್ರಿಸ್ತನಲ್ಲಿ ಹೊಸ ಜೀವನದ ಒಂದು ಅರ್ಥನಿರೂಪಣೆ (3:1-14)
   A. ಮೇಲಿನವುಗಳನ್ನು ಹುಡುಕುವದು (3:1-4)
   B. ಅವರ ಹಿಂದಿನ ಕಾಲದ ಅನೈತಿಕತೆಯನ್ನು ವಿಸರ್ಜಿಸಿ ಬಿಡುವದು (3:5-7)
   C. ಭಕ್ತಿಹೀನ ಗುಣಸ್ವಭಾವವನ್ನು ಬಿಟ್ಟು ಬಿಡುವದು (3:8, 9)
   D. ಕ್ರಿಸ್ತನ ಸಾರೂಪ್ಯವುಳ್ಳವರಾಗುವಂತೆ ನೂತನಗೊಳ್ಳುವದು (3:10, 11)
   E. ಭಕ್ತವಂತ ಗುಣಗಳನ್ನು ಧರಿಸಿಕೊಳ್ಳುವದು (3:12-14)

XI. ಕ್ರಿಸ್ತನಿಗೆ ಪ್ರತಿಸ್ಪಂದನೆ (3:15-17)
   A. ಆತನಿಂದಾಗುವ ಸಮಾಧಾನವನ್ನು ಪಡೆದುಕೊಳ್ಳುವದು (3:15)
   B. ಹಾಡುವದರೊಂದಿಗೆ ಆತನನ್ನು ಆರಾಧಿಸುವದು (3:16)
   C. ಎಲ್ಲವನ್ನೂ ಆತನ ಹೆಸರಿನಲ್ಲಿ ಮಾಡುವದು (3:17)

XII. ಸಂಬಂಧಗಳಲ್ಲಿರುವ ಜವಾಬ್ದಾರಿಗಳು (3:18— 4:1)
   A. ಗಂಡಂದಿರ ಕಡೆಗೆ ಹೆಂಡತಿಯರ ಜವಾಬ್ದಾರಿಗಳು (3:18)
   B. ಹೆಂಡತಿಯರ ಕಡೆಗೆ ಗಂಡಂದಿರ ಜವಾಬ್ದಾರಿಗಳು (3:19)
   C. ತಂದೆತಾಯಿಗಳ ಕಡೆಗೆ ಮಕ್ಕಳ ಜವಾಬ್ದಾರಿಗಳು (3:20)
   D. ಮಕ್ಕಳ ಕಡೆಗೆ ತಂದೆಗಳ ಜವಾಬ್ದಾರಿಗಳು (3:21)
   E. ಯಜಮಾನರ ಕಡೆಗೆ ದಾಸರ ಜವಾಬ್ದಾರಿಗಳು (3:22-25)
   F. ದಾಸರ ಕಡೆಗೆ ಯಜಮಾನರ ಜವಾಬ್ದಾರಿಗಳು (4:1)

XIII. ಅಂತಿಮ ಹೇಳಿಕೆಗಳು (4:2-18)
   A. ಬುದ್ಧಿವಾದಗಳು (4:2-6)
      1. ಪ್ರಾರ್ಥಿಸಬೇಕು, ವಿಶೇಷವಾಗಿ ಪೌಲನಿಗೋಸ್ಕರ (4:2-4)
      2. ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳುವದು (4:5, 6)
   B. ಸಲಹಾಸೂಚನೆಗಳು ಮತ್ತು ಶಿಫಾರಸುಗಳು (4:7-9)
      1. ತುಖಿಕನಿಗೆ ಸಂಬಂಧ ಪಟ್ಟದ್ದು (4:7, 8)
      2. ಒನೇಸಿಮನಿಗೆ ಸಂಬಂಧ ಪಟ್ಟದ್ದು (4:9)
   C. ವಂದನೆಗಳು ಮತ್ತು ಹೇಳಿಕೆಗಳು (4:10-18)
      1. ಜೊತೆ ಕೆಲಸದವರಿಂದ ವಂದನೆಗಳು (4:10-14)
         a. ಯೆಹೂದಿ ಕ್ರೈಸ್ತರಿಂದ (4:10, 11)
         b. ಅನ್ಯಜನಾಂಗದ ಕ್ರೈಸ್ತರಿಂದ (4:12-14)
      2. ಸಹೋದರರಿಗೆ ವಂದನೆಗಳು ಮತ್ತು ಹೇಳಿಕೆಗಳು (4:15-17)
         a. ಲವೊದಿಕೀಯದವರಿಗೆ ಮತ್ತು ನುಂಫಳಿಗೆ (4:15)
         b. ಪೌಲನ ಪತ್ರಿಕೆಗಳನ್ನು ಓದುವದರ ವಿಷಯವಾಗಿ (4:16)
         c. ಅರ್ಖಿಪ್ಪನಿಗೆ (4:17)

3. ಮುಕ್ತಾಯದ ಹೇಳಿಕೆಗಳು (4:18)

## ಅಡಿಟಿಪ್ಪಣಿಗಳು

[1]Ernst Theodor Mayerhoff, *Der Brief an die Kolosser, mit vornehmlicher Berücksichtigung der drei Pastoralbriefe, kritisch geprüft* (Berlin: Hermann Schultze, 1838). [2]Henry Clarence Thiessen, *Introduction to the New Testament* (Grand Rapids, Mich.: Wm. B. Eerdmans Publishing Co., 1943), 229–30. [3]Donald Guthrie, *New Testament Introduction*, 3d ed., rev. (Downers Grove, Ill.: Inter-Varsity Press, 1970), 554. [4]Robert G. Bratcher and Eugene A. Nida ರವರು ಕೊಲೊಸ್ಸೆಯವರಿಗೆ ಮತ್ತು ಎಫೆಸದವರಿಗೆ ನಡುವಿನ ಸಂಬಂಧದ ಬಗ್ಗೆ ಚರ್ಚಿಸಿದರು: "ಕೊಲೊಸ್ಸೆಯವರಿಗೆ ಸಹ ಒಂದು ರೀತಿಯಲ್ಲಿ ಎಫೆಸದವರಿಗೆ ಸಂಬಂಧ ಹೊಂದಿದೆ. ಎರಡು ಪತ್ರಿಕೆಗಳಲ್ಲಿರುವ ವಿಷಯಸೂಚಿಗಳಲ್ಲಿ ಹೋಲಿಕೆಗಳಿರುವದರ ಜೊತೆಗೆ, ಪೌಲನು ಸೆರೆಮನೆಯಲ್ಲಿ ಸಹ ಇದ್ದಾನೆ [ಎಫೆಸ 6:20] ಮತ್ತು ಪೌಲನು ಹೇಗೆ ಹೊಂದಿಕೊಂಡು ಹೋಗುತ್ತಿದ್ದಾನೆಂದು ವಾಚಕರಿಗೆ ತಿಳಿಯಪಡಿಸುವ ಅದೇ ಆದೇಶದೊಂದಿಗೆ ತುಖಿಕನನ್ನು ಪತ್ರಿಕೆಯಯೊಂದಿಗೆ ಕಳುಹಿಸಲಾಗುತ್ತದೆ [ಎಫೆಸ 6:21, 22]" (Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators [New York: United Bible Societies, 1977], 1). [5]ಈ ಸಮಾನತೆಗಳ ಕುರಿತ ಹೆಚ್ಚಿನ ಅಧ್ಯಯನಕ್ಕಾಗಿ, ನೋಡಿರಿ H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 47–49. [6]Curtis Vaughan, *Colossians and Philemon*, Bible Study Commentary (Grand Rapids, Mich.: Zondervan Publishing House, 1980), 15. [7]Chrysostom *Colossians* 1. Everett Ferguson, *Early Christians Speak* (Abilene, Tex.: Biblical Research Press, 1981), 244; and Ralph P. Martin, *Colossians and Philemon*, New Century Bible Commentary (Grand Rapids, Mich.: Wm. B. Eerdmans Publishing Co., 1973), 217 ರನ್ನು ಸಹ ನೋಡಿರಿ. [8]ಈ ದಿನಾಂಕಗಳ ಕುರಿತ ಹೆಚ್ಚಿನ ಅಧ್ಯಯನಕ್ಕಾಗಿ, ನೋಡಿರಿ Colin J. Hemer, *The Book of Acts in the Setting of Hellenistic History*, ed. Conrad H. Gempf (Winona Lake, Ind.: Eisenbrauns, 1990), 169–71. [9]Pliny *Natural History* 21.51. [10]Tacitus *Annals* 14.27.

[11]E. J. Banks, "Colossae," in *The International Standard Bible Encyclopedia*, rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:732. [12]Xenophon *Anabasis* 1.2.6. [13]Herodotus *Histories* 7.30. [14]Josephus *Antiquities of the Jews* 12.3.4. [15]See J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 20. [16]Strabo *Geography* 12.8.13. [17]ರೋಮನ್ ಸಾಮ್ರಾಜ್ಯವು ಅಧಿಕೃತವಾಗಿ ಜನೆವರಿ 16, ಕ್ರಿ.ಪೂ. 27ರಂದು ಆರಂಭಗೊಂಡಿತು. ನೋಡಿರಿ S. Angus and A. M. Renwick, "Roman Empire," in *The International Standard Bible Encyclopedia*, rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:208. [18]"ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಉಲ್ಲೇಖಿಸಲಾಗಿರುವ ಕನಿಷ್ಠ ಮೂವರು ಕ್ರೈಸ್ತರ ಹೆಸರುಗಳು ವಿಗ್ರಹಾರಾಧನೆಯ ದೇವತೆಗಳಿಗೆ ಪರೋಕ್ಷ ಸೂಚ್ಯಾರ್ಥ ಹೊಂದಿವೆ: ತುಖಿಕನು (ಗ್ರೀಕ್‌ನಿಂದ *Tuche* = ಗತಿ), ಎಪಫ್ರನು (Epaphroditus ಎಂಬದರ ಕ್ಲುಪ್ತ ರೂಪ, Aphroditeನಿಗೆ ಸಂಬಂಧ ಹೊಂದಿದ್ದು), ಮತ್ತು ನುಂಫಳು (. . . Nymphadora ದಿಂದ, 'ನುಂಫನ ವರ')" (David M. Hay, *Colossians*, Abingdon New Testament Commentaries [Nashville: Abingdon Press, 2000], 25). [19]Peter Toon, "Gnosticism," in *The New International Dictionary of the Bible*, ed. Merrill C. Tenney, rev. J. D. Douglas (Grand Rapids, Mich.: Regency Reference Library, Zondervan Publishing House, 1987), 393. [20]Lightfoot, 71–111. Lightfootನು ಮೃತ ಸಮುದ್ರದ ಸುರುಳಿಗಳ ಆಧಾರದಲ್ಲಿ ಎಸ್ಸೇನರ ಕುರಿತಾಗಿ ತನ್ನ ವಾದವನ್ನು ಮಂಡಿಸಲಿಲ್ಲ, ಯಾಕೆಂದರೆ ಇವುಗಳ ಕಂಡು ಹಿಡಿಯಲ್ಪಡುವದಕ್ಕೆ ಮುಂಚೆಯೇ ಆತನು ಬರೆದಿದ್ದನು.

[21]Guthrie, 550. [22]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 167. [23]Clinton E. Arnold, *The Colossian Syncretism* (Grand Rapids, Mich.: Baker Books, 1996), 308.




ಪೌಲನ ದಿನದಲ್ಲಿದ್ದ ರೋಮನ್ ಜಗತ್ತು